ಮುಂಜಾವು
ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114
5ನೇ ವರ್ಷ 44ನೇ ಸಂಚಿಕೆ ಕೊಪ್ಪ 26-7-1987 ಭಾನುವಾರ. ಬೆಲೆ 50 ಪೈಸೆ

ಮುಂದುವರಿದ ಶಂಕರ್ ಕಾರ್ಮಿಕರ ಮುಷ್ಕರ :
ಕಂಪೆನಿಗೆ ನಾಗರಿಕರ ಅಪೂರ್ವ ಪ್ರತಿಭಟನೆ

ಕೊಪ್ಪ : 9 ದಿನಗಳಿಂದ ನಡೆಯುತ್ತಿರುವ ಇಲ್ಲಿನ ಶಂಕರ್ ಸಾರಿಗೆ ಸಂಸ್ಥೆ ಕಾರ್ಮಿಕರ ಮುಷ್ಕರ ಬಗೆಹರಿಯುವ ಯಾವ ಸ್ಪಷ್ಟ ಕುರುಹೂ ಇಲ್ಲದೆ ಅನಿರ್ದಿಷ್ಟವಾಗಿ ಮುಂದುವರಿದಿದೆ.

ಜು. 23 ರಂದು ರಾಜ್ಯ ಕಾರ್ಮಿಕ ಮಂತ್ರಿ ಎಸ್. ಕೆ. ಕಾಂತ ಏರ್ಪಡಿಸಿದ್ದ ಸಂಧಾನ ಸಭೆಯಲ್ಲಿ ರಮೇಶರಾವ್ ಆಗಲಿ, ಸಂಸ್ಥೆಯ ಇನ್ಯಾರೋ ಹಿರಿಯ ಅಧಿಕಾರಿಯಾಗಲಿ ಭಾಗವಹಿಸದೆ, ಚಿಕ್ಕಮಗಳೂರಿನ ವಕೀಲ ರಾಮದಾಸ್ ಪೈ ಕಂಪೆನಿಯನ್ನು ಪ್ರತಿನಿಧಿಸಿದ್ದರು. ಚರ್ಚೆ 24 ರಂದು ಸಹ ಮುಂದುವರಿಯಿತಾದರೂ ಯಾವುದೇ ಇತ್ಯರ್ಥ ಮೂಡಲಿಲ್ಲ. ಸೋಮವಾರ ಮತ್ತೆ ಮಾತುಕತೆ ಮುಂದುವರಿಯಲಿದೆ.

ಹಳೇ ರಾಗ

ಜು. 9ರ ಸಂಧಾನ ಸಭೆಯಲ್ಲಿ ಸಂಸ್ಥೆ ಘೋಷಿಸಿದ್ದ 3 ರಿಯಾಯ್ತಿಗಳಾದ: ಒಂದು ಜೊತೆ ಚಪ್ಪಲಿ, 15 ರೂ. ಮನೆ ಬಾಡಿಗೆ ಭತ್ಯ ಹಾಗೂ ಲೈನ್ ಸಿಬ್ಬಂದಿಗೆ 5 ದಿನದ 'ತುರ್ತು-ಮತ್ತು-ಅನಾರೋಗ್ಯ' ರಜೆ- ಇವಿಷ್ಟನ್ನು ಮಾತ್ರ ಕೊಡುವುದಾಗಿಯೂ ತಕ್ಷಣವೇ ಮುಷ್ಕರ ನಿಲ್ಲಿಸಬೇಕೆಂದೂ, ಬೇಡಿಕೆಗಳ ಬಗ್ಗೆ ಕಾರ್ಮಿಕರ ಜೊತೆ ಮಾತುಕತೆ ನಡೆಸುವುದೇ ಬಿಡುವುದೇ ಎಂಬುದನ್ನು ಮತ್ತೆ ಪರಿಶೀಲಿಸುವುದಾಗಿಯೂ ಸಂಸ್ಥೆಯ ಪರವಾಗಿ ಪಟ್ಟು ಹಿಡಿಯಲಾಯಿತೆನ್ನಲಾಗಿದೆ.

ಮುಖ್ಯ ಬೇಡಿಕೆಗೆ ನಕಾರ

ಆದರೆ ಮುಖ್ಯ ಬೇಡಿಕೆಯಾದ ವೇತನ ಹೆಚ್ಚಳದ ವಿಚಾರದಲ್ಲಿ ಯಾವುದೇ ಪಕ್ಷ ಶಾಶ್ವತ ಲಿಕ ಪರಿಹಾರವನ್ನಾದರೂ ಘೋಷಿಸಿ, ಮಿಕ್ಕ ಬೇಡಿಕೆಗಳ ಸಂಧಾನಕ್ಕೆ ಖಚಿತ ಭರವಸೆ ದೊರೆಯದೆ ಮುಷ್ಕರ ನಿಲುಗಡೆಗೆ ಕಾರ್ಮಿಕರು ಒಪ್ಪಲಿಲ್ಲವೆನ್ನಲಾಗಿದೆ.

ಕಂಪೆನಿಯ "ಚಮಚಾ" ಸಂಘದ "ವರಿಷ್ಠ ನಾಯಕರು"ಗಳು ಸಹ ಸಭೆಗಾಗಿ ಹೋಗಿ, ಮಂತ್ರಿಗಳಿಂದ 'ನಿವಾಳಿಸಿ'ಕೊಂಡುದಲ್ಲದೆ, ಅವರ ಅನುಮತಿಯೊಂದಿಗೆ ಸಭೆಯಲ್ಲಿ ಕುಳಿತು ಕಾರ್ಮಿಕರ ಹಿತಕ್ಕೆ ವಿರೋಧವಾಗಿ ತಮ್ಮ ಯಥಾಶಕ್ತಿ ಒಂದೆರಡು ಮಾತನಾಡಿದರೆನ್ನಲಾಗಿದೆ.

[ಹಲವು ಕಾರ್ಮಿಕರು ದಿನಕ್ಕೆ 14-16 ಗಂಟೆ ದುಡಿಯುವ ಸಂದರ್ಭವೂ ಉಂಟು ಎಂಬುದಕ್ಕೆ "4 ಗಂಟೆಯ ಡ್ಯೂಟಿಯಾಗುವುದೂ ಉಂಟು" (ಸ್ಪೇರ್ ಡ್ರೈವರ್-ಕಂಡಕ್ಟರ್‌ಗಳದು) ಎಂತಲೂ, "ನಾವು 15 ಬೇಡಿಕೆಗಳನ್ನು ಮಂಡಿಸಿದ್ದೆವು; ನಮ್ಮ ದೇವರಂಥ ಮಾಲೀಕರು ಇನ್ನೇನು ಈಡೇರಿಸಬೇಕೆಂದಿದ್ದಾಗ ಈ ಯೂನಿಯನ್ನಿನವರು ಮುಷ್ಕರ ಮಾಡಿ ಬಿಟ್ಟರು" ಎಂತಲೂ ಅಣಿ ಮುತ್ತು ಉದುರಿಸಿದರಂತೆ!]

ಶೃಂಗೇರಿ: ನಾಗರಿಕರ ಪ್ರತಿಭಟನೆ; ಸರ್ವಪಕ್ಷ ನಿಯೋಗ

ಜು. 21 ರಂದು ಶೃಂಗೇರಿಯಲ್ಲಿ ಸಂಸ್ಥೆಯ ವಿರುದ್ಧ ನಾಗರಿಕರ ಬೃಹತ್ ಪ್ರತಿಭಟನೆ ನಡೆಯಿತು. ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿ, ಕೂಡಲೇ ಎಲ್ಲಾ ಬಸ್ಸುಗಳನ್ನು ಓಡಿಸಲು ವ್ಯವಸ್ಥೆ ಮಾಡಬೇಕೆಂದು, ಪುರಭವನದ ಬಳಿ ಸೇರಿದ್ದ ಐನೂರಕ್ಕೂ ಹೆಚ್ಚು ಜನ ಒತ್ತಾಯಿಸಿದರು. (8ನೇ ಪುಟಕ್ಕೆ)

ಹಂದಿ ಸಾಕಣೆ ಕೇಂದ್ರವನ್ನು ಮಣ್ಣುಗೂಡಿಸಿದ ಗ್ರಾಮೀಣ ಬ್ಯಾಂಕ್

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ನೆಮ್ಮಾರಿನ ಸುಧಾರಿತ ತಳಿ ಹಂದಿ ಸಾಕಣೆ ಕೇಂದ್ರದ ಹಣಕಾಸಿನ ವ್ಯವಹಾರದಲ್ಲಿ ಈ ಹಿಂದೆಯೇ ವರದಿಯಾಗಿರುವಂತೆ ಅಲ್ಲಿನ ಚಿ. ಕೊ. ಗ್ರಾಮೀಣ ಬ್ಯಾಂಕ್ ಮ್ಯಾನೇಜರ್ ಅಶೋಕ್ ಕುಮಾರ್ ನಡೆಸಿರುವುದಾಗಿ ಪತ್ತೆಯಾಗಿರುವ ಅವ್ಯವಹಾರಗಳನ್ನು ವ್ಯವಸ್ಥಿತವಾಗಿ ಮುಚ್ಚಿ ಹಾಕುವ ಕಾರ್ಯ ಅದೇ ಬ್ಯಾಂಕಿನ ಚೇರ್ಮನ್‌ರವರ 'ಮೇಲ್ವಿಚಾರಣೆ'ಯಲ್ಲಿ ಬಹುತೇಕ ಯಶಸ್ವಿಯಾಗಿ ನಡೆಯುತ್ತಿದೆ.

ಶೃಂಗೇರಿಯ ಪ್ರಭಾವಿಯೊಬ್ಬರಿಗೆ ಸಂಬಂಧಿ ಎನ್ನಲಾಗಿರುವ ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿ ಪಿ ಎಸ್. ಬಿ ರಾವ್ ಅವರು ಈ ಕಾರ್ಯಕ್ಕೆ ಸಂಪೂರ್ಣ ಶ್ರೀರಕ್ಷೆ ನೀಡಿದ್ದಾರೆಂಬುದು ಬಹಳ ನಿಚ್ಚಳವಾಗಿ ಕಂಡುಬಂದಿದೆ.

ಕೊನೆಯುಸಿರು

16 ಮಂದಿ ಪರಿಶಿಷ್ಟ ಜನಾಂಗದ ಮಹಿಳಾ ಫಲಾನುಭವಿಗಳಿಗೆ ಸಾಲ-ಸಬ್ಸಿಡಿ ನೆರವಿನೊಂದಿಗೆ 1986ರ ಏಪ್ರಿಲ್‌ನಲ್ಲಿ ಅತ್ಯುತ್ತಮ ರೀತಿಯಲ್ಲಿ ಆರಂಭವಾಗಿದ್ದ ಈ ಕೇಂದ್ರದಲ್ಲಿ ಈಗ 49 ರಲ್ಲಿ ಕೇವಲ 11 ಹಂದಿಗಳು ಮಾತ್ರ-ಸಾವನ್ನು ಎದುರು ನೋಡುತ್ತಾ-ಬದುಕಿ ಉಳಿದುಕೊಂಡಿದ್ದು, ಇಡೀ ಕೇಂದ್ರ ಅಥವಾ ಇಡೀ ಯೋಜನೆ ಈಗ ಕೊನೆಯುಸಿರೆಳೆಯುತ್ತಿದೆ.

ಮೋಸದಿಂದ ದಾಖಲೆಗಳಿಗೆ ಸಹಿ

ಈ ಕೇಂದ್ರದಲ್ಲಿ ಅವ್ಯವಹಾರ ಬಯಲಾದ ನಂತರ ಹಲವು ದಾಖಲೆಗಳಿಗೆ ಅಲ್ಲಿನ ಫಲಾನುಭವಿಗಳ ಸಹಿ ಪಡೆಯಲು ಅಶೋಕ್‌ಕುಮಾರ್ ತೀವ್ರವಾಗಿ ಯತ್ನಿಸಿ ವಿಫಲವಾಗಿದ್ದರು ಆದರೆ, ಈ ಪ್ರಕರಣ ಬೆಳಕಿಗೆ ಬರಲು ಮುಖ್ಯ ಕಾರಣ ಕರ್ತರಲ್ಲೊಬ್ಬರಾಗಿದ್ದ, ತಾ. ಅ. ಮಂ. ಪಶುವೈದ್ಯ ಡಾ|| ಪರಮೇಶ್ವರಪ್ಪ ಅವರೇ ಈಗ ಮ್ಯಾನೇಜರೊಡನೆ ಶಾಮಿಲಾಗಿ, ತನ್ನ ಮೇಲೆ ಫಲಾನುಭವಿಗಳು ಇಟ್ಟಿದ್ದ ನಂಬಿಕೆಯನ್ನು ಪಯೋಗಿಸಿ ಮೋಸದಲ್ಲಿ ಅವರಿಂದ ದಾಖಲೆಗಳಿಗೆ ಸಹಿ ಪಡೆದಿದ್ದು, ಅವನ್ನೆಲ್ಲ ಕ್ಷೇತ್ರಾಭಿವೃದ್ಧಿ ಅಧಿಕಾರಿ ಓಂಪ್ರಕಾಶ್ ವಶಪಡಿಸಿಕೊಂಡಿದ್ದಾರೆ.

'ದಾಖಲೆ'ಗಳು

1. ಬಿ.ಡಿ.ಓ. ಗಾಗಲಿ, ಮೇಲಧಿಕಾರಿಗಳಿಗಾಗಲಿ, ಫಲಾನುಭವಿಗಳಿಗಾಗಲಿ-ಯಾರಿಗೂ ತಿಳಿಸದೆ, ಯೋಜನೆಯ ಅಂದಾಜನ್ನು ಮೀರಿ ಖರ್ಚು ಮಾಡಿದ್ದನ್ನು ಸರಿದೂಗಿಸಲು ಮ್ಯಾನೇಜರ್ ಫಲಾನುಭವಿಗಳಿಗೆ ನೀಡಿದ್ದ ತಲಾ 2 ಸಾವಿರ ರೂ ಹೆಚ್ಚುವರಿ ಸಾಲವನ್ನು "ನಮ್ಮ ಒಪ್ಪಿಗೆಯ ಮೇಲೆಯೇ ನೀಡಿರುವುದು" ಎಂದು ಅವರಿಂದ ಸಹಿ ಹಾಕಿಸಿಕೊಳ್ಳಲಾಗಿದೆ.

2. ಓಚರ್‌ಗಳಿಲ್ಲದೆ ಖರ್ಚು ತೋರಿಸಿದ್ದ ಸುಮಾರು 3500 ರೂ. ಗಳಿಗೆ ಅವರಿಂದ ಸಹಿ ತೆಗೆದುಕೊಂಡು ಆ ಹಣವನ್ನು ತಾನೇ ಕಟ್ಟಿ, ಲೆಕ್ಕದ ವ್ಯತ್ಯಾಸವನ್ನು ತೊಡೆದು ಹಾಕುವ ಹಂಚಿಕೆ ಮಾಡಲಾಗಿದೆ. 3125 ರೂ.ಗೆ ಬದಲು 4125 ರೂ. ಪಾವತಿ ಮಾಡಿದ್ದ ಪ್ರಕರಣದಲ್ಲಿ ಆ ಹೆಚ್ಚುವರಿ 1000 ರೂ ಗಳನ್ನು ಬಡ್ಡಿ ಸಹಿತ ಜಮಾ ಮಾಡಿಸಲಾಗಿದೆ.

3. ಮರಿಗಳ ಆಹಾರ ಮತ್ತಿತರ ಖರ್ಚುಗಳಿಂದ ಅಸಮರ್ಪಕ ಓಚರ್‌ಗಳೊಂದಿಗೆ ಲೆಕ್ಕ ತೋರಿಸಿರುವ 47367-75 ರೂ ಹಾಗೂ ಮೇಲ್ಕಂಡಂತೆ ಓಚರುಗಳಿಲ್ಲದ 3500 ಒಟ್ಟು ಸುಮಾರು 51 ಸಾವಿರ ರೂ. ಖರ್ಚು "ಪೂರ್ತಿ ಸಮರ್ಪಕವಾಗಿದೆ ಹಾಗೂ ಆ ಹಣ ವಸ್ತುಗಳ ರೂಪದಲ್ಲಿ ಪೂರ್ಣವಾಗಿ ನಮಗೆ ಸಂದಿರುತ್ತೆ" ಎಂಬಂತೆ ಸಹಿ ಹಾಕಿಸಿಕೊಳ್ಳಲಾಗಿದೆ. ಇಷ್ಟೇ ಅಲ್ಲದೆ, ಈ ವ್ಯವಹಾರಗಳನ್ನೆಲ್ಲ ಪೂರ್ಣವಾಗಿ ನಮಗೆ ತಿಳಿಸಿಯೇ ಮಾಡಿದ್ದು ಎಂದೂ ಸಹಿ ಪಡೆಯಲಾಗಿದೆ.

ಪಶುವೈದ್ಯರ ನಂಬಿಕೆ ದ್ರೋಹ?

ಅವ್ಯವಹಾರ ಬೆಳಕಿಗೆ ಬಂದ ನಂತರ ಬ್ಯಾಂಕಿನಿಂದ ಹಂದಿಗಳ ಮೇವಿಗೆ ಹಣ ದೊರಕದೆ, ಬಿ ಡಿ. ಓ. ಕಚೇರಿಯ ರಿವಾಲ್ವಿಂಗ್ ಫಂಡ್‌ನಿಂದ ಮೇವು ಒದಗಿಸಲಾಗಿದ್ದು, ಆ ಸಂಬಂಧದ ಓಚರ್‌ಗಳಿಗೆ ಸಹಿ ಹಾಕಿಸುವಾಗ ಮ್ಯಾನೇಜರರ ಓಚರ್‌ಗಳಿಗೂ ಸಹಿ ಹಾಕಿಸಿದರೆನ್ನಲಾಗಿದೆ.

ಹಂದಿಗಳು ಹಾಗೂ ಇಲ್ಲೇ ಹುಟ್ಟಿದ ಮರಿಗಳು ಸಾಯುತ್ತಿರುವುದಕ್ಕೂ ಈ ವೈದ್ಯರ ಅನನುಭವವೇ ಕಾರಣವೆಂದು ಫಲಾನುಭವಿಗಳು ಶಂಕಿಸುತ್ತಾರೆ. ಹಿಂದಿದ್ದ ಪಶುವೈದ್ಯರ ಜೊತೆಗೆ ಪಶುವೈದ್ಯ ಇಲಾಖೆಯ ವೈದ್ಯರು ಸಹ ಇಲ್ಲಿಗೆ ಭೇಟಿ ಕೊಡುತ್ತಿದ್ದರು. ಈಗ ಅವರು ಬರುತ್ತಿಲ್ಲ. ಇವರ ಅನುಭವ ಬಹುಶಃ ಸಾಕಾಗುತ್ತಿಲ್ಲ ಎನ್ನುತ್ತಾರೆ. ಒಂದು ಹಂದಿ 6 ಮರಿ ಹಾಕಿದ್ದರಲ್ಲಿ 1 ಮರಿ ಮಾತ್ರ ಉಳಿದಿದೆ.

20 ಅಂಶದ ಸಭೆಯಲ್ಲಿ

ಈ ಅವ್ಯವಹಾರದ ಪ್ರಕರಣ ಹಿಂದಿನ 20 ಅಂಶದ ಸಭೆಯಲ್ಲಿ ಪ್ರಸ್ತಾಪವಾದಾಗ ಅದನ್ನು ಪೂರ್ಣವಾಗಿ ತನಿಖೆ ಮಾಡಿ ಕ್ರಮ ಕೈಗೊಳ್ಳುವಂತೆ ಗೋವಿಂದ ಗೌಡರು ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದು, ತನಿಖೆ ನಡೆಸುವ ವೇಳೆಗೆ ಈ ಹಿಂದೆ ಹೇಳಿದ 'ಪ್ರಭಾವ' ಕೆಲಸ ಮಾಡಿತೆನ್ನಲಾಗಿದೆ.

ಅವರು ತನಿಖೆ ಮಾಡುವ 'ಅಗತ್ಯ' ಕಾಣದೆಯೋ ಏನೋ, ಬಿಡಿಬರನ್ನೇ ತರಾಟೆಗೆ ತೆಗೆದುಕೊಂಡರಂತೆ—"ಆತ ದೊಡ್ಡ ಶ್ರೀಮಂತರ ಮಗ. ಅವನಿಗೆ ಮೋಸ-ಅವ್ಯವಹಾರ ಮಾಡುವ ಅವಶ್ಯಕತೆಯೇನೂ ಇಲ್ಲ. ನಿಮ್ಮ ಅಲಕ್ಷ್ಯದಿಂದಲೇ ಇದೆಲ್ಲ ಆಗಿದೆ...." ಮುಂತಾಗಿ. ಒಟ್ಟಿನಲ್ಲಿ ಬ್ಯಾಂಕ್ ಚೇರ್ಮನ್ ಮೊದಲಾಗಿ ಈ ಮ್ಯಾನೇಜರನ್ನು ಬಚಾವ್ ಮಾಡಲು ಶ್ರಮಿಸುತ್ತಿರುವವರೆಲ್ಲ ಹೇಳುತ್ತಿರುವ ಮಾತನ್ನೇ ಅವರೂ ಒಪ್ಪಿದ್ದಾರೆನ್ನಿಸುತ್ತದೆ.

ಹಾಗಾದರೆ ಬ್ಯಾಂಕು ಮತ್ತಿತರ ಕಡೆಗಳಲ್ಲಿ ಅವ್ಯವಹಾರ ಮಾಡುವವರು ಯಾವಾಗಲೂ ಬಡವರೇ ಆಗಿರುತ್ತಾರೆ-ಆಗಿರಲೇಬೇಕು ಎಂದಂತಾಯಿತು!

ಎರಡನೆಯದಾಗಿ, ಈತ ಒಂದು ವೇಳೆ ಅವ್ಯವಹಾರ ಮಾಡದಿದ್ದರೂ, ಯೋಜನೆಯ ಪೂರ್ಣ ವಹಿವಾಟನ್ನೂ ನೋಡಿಕೊಳ್ಳುತ್ತಿದ್ದ ಈತ ಹಾಗಾದರೆ ಮಾಡಿದ್ದಾದರೂ ಏನು? ಕೇವಲ ನಿರ್ಲಕ್ಷ್ಯ ಅಥವಾ ಕರ್ತವ್ಯ ಲೋಪವೆ? ಅಥವಾ ಕಟ್ಟಾ ಬಡವರ ವಿರೋಧಿ ಧೋರಣೆಯೆ? ಇದನ್ನಾದರೂ ತನಿಖಾಧಿಕಾರಿಗಳು ಕಂಡು ಹಿಡಿಯಲಿಲ್ಲವೇಕೆ? ಎಂಬ ಪ್ರಶ್ನೆಗಳು ಏಳುತ್ತವೆ.

ನವೆಂಬರಿನಲ್ಲೇ ಅನುಮಾನ?

ಶಾಖಾಧಿಕಾರಿಗಳ ಬಗ್ಗೆ ನಂಬಲರ್ಹವಾದಂಥ ಸ್ವಲ್ಪ ದೂರುಗಳು ಬಂದ ತಕ್ಷಣ ಅವರನ್ನು ಕೇಂದ್ರ ಕಚೇರಿಗೆ ಕೊಂಡು, ತಡವಿಲ್ಲದೆ ಆಮೂಲಾಗ

(2ನೇ

'ವೇದಿಕೆ' ಯಶಸ್ವಿಗೊಳಿಸಿದ್ದಕ್ಕೆ ಧನ್ಯವಾದಗಳು

ಪ್ರಿಯ ಓದುಗರೆ,

7.6.87ರ ನಮ್ಮ ಪತ್ರಿಕೆಯಲ್ಲಿ ಶುರುವಾದ, ಜಾತ್ಯತೀತ ವಿವಾಹ, ಬಹಿಷ್ಕಾರ, ಪ್ರಾಯಶ್ಚಿತ್ತ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದ ಸಂವಾದ ಈ ಎಂಟು ವಾರಗಳಲ್ಲಿ ಈ ವಿಚಾರದ ಪ್ರತ್ಯಕ್ಷ-ಪರೋಕ್ಷ ಮುಖಗಳನ್ನೆಲ್ಲ ಸಾಕಷ್ಟು ವಿಶದವಾಗಿ ಚರ್ಚಿಸಿದೆ ಎನ್ನಿಸುತ್ತದೆ. ಈ ಸಂಚಿಕೆಯಲ್ಲಿ ಪ್ರತಿಕ್ರಿಯೆಗಳ ಕೊನೇ ಕಂತು ಪ್ರಕಟಿಸಿದೆ. ಈ ಸಂವಾದದಲ್ಲಿ ಇಷ್ಟೊಂದು ಆಸಕ್ತಿಯಿಂದ ಪಾಲ್ಗೊಂಡು 'ವೇದಿಕೆ'ಯನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಎಲ್ಲಾ ಓದುಗರಿಗೂ 'ಮುಂಜಾವು' ಧನ್ಯವಾದ ಸಲ್ಲಿಸುತ್ತದೆ.

ಈ ಸಂಚಿಕೆಯಲ್ಲಿ ನಮ್ಮ ತಂದೆಯ ಹೆಸರಿನಲ್ಲಿರುವ 'ಸ್ಪಷ್ಟನೆ'ಯನ್ನು ಪ್ರಕಟಿಸಿದ್ದೇನೆ. ರಿಜಿಸ್ಟರ್ಡ್ ಅಂಚೆಯಲ್ಲಿ ಬಂದಿದ್ದ ಈ ಪತ್ರ ನಮ್ಮ ತಂದೆಯ ಕೈಬರಹದಲ್ಲಿದೆ. ಆದರೆ ಅದರಲ್ಲಿನ ವಿಷಯವನ್ನು ಬೇರೆಯವರು ಬೇರೆ ಕಡೆಯಲ್ಲಿ ಹಲವು ಬಾರಿ ಚರ್ಚಿಸಿ, ಒಬ್ಬರು ಅದರ ಕರಡು ಬರೆದು, ಪುನಃ ಚರ್ಚಿಸಿ ಅಂತಿಮಗೊಳಿಸಿ, ಅನಂತರ ಅದನ್ನು ನಮ್ಮ ತಂದೆಯ ಕೈಯಲ್ಲಿ ಬರೆಯಿಸಿರುವುದು. ಇದೆಲ್ಲ ಯಾರು, ಎಲ್ಲಿ ಮಾಡಿದ್ದು ಎಂಬುದೆಲ್ಲ ಸಾಕ್ಷ್ಯಾಧಾರ ಸಮೇತ ನಮಗೆ ಗೊತ್ತು. ಅಷ್ಟೇ ಅಲ್ಲ, ಇಂಥದೊಂದು 'ಪ್ರತಿಕ್ರಿಯೆ' ಅಥವಾ 'ಸ್ಪಷ್ಟನೆ' ನಮ್ಮ ತಂದೆಯವರ ಹೆಸರಲ್ಲಿ ಬರಲಿದೆಯೆಂದು ಅದು ಬರುವುದಕ್ಕೆ ಹಲವು ದಿನ ಮೊದಲೇ ನಮಗೆ ತಿಳಿದಿತ್ತು. ಆದ್ದರಿಂದ ಅದೇನೂ ಅವರ ಸ್ವಂತದ, ಪ್ರಾಮಾಣಿಕ ಪ್ರತಿಕ್ರಿಯೆಯಲ್ಲ. ಇದಿರಲಿ.

8-10 ಸಾಲಿಗಿಂತ ಹೆಚ್ಚಿಗೆ ಬರೆದು ಅಭ್ಯಾಸವಿಲ್ಲದ ಆ ವೃದ್ಧರಿಗೆ ಫುಲ್‌ಸ್ಕೇಪ್ 2 ಪುಟದಷ್ಟಿರುವ ಇದನ್ನು **ಉಕ್ತಲೇಖನ** ಬರೆಯಲು ಎಷ್ಟು ಹಿಂಸೆಯಾಗಿರಬಹುದು? ಅದಕ್ಕಿಂತ ಮಿಗಿಲಾಗಿ, ಆ ಒಕ್ಕಣೆಯಲ್ಲಿನ ಹೃದಯ ಹಿಂಡುವಂಥ ವಿಷಯದ ಮಾನಸಿಕ ಒತ್ತಡ ಎಷ್ಟು ಹಿಂಸೆ ಕೊಟ್ಟಿರಬಹುದು ಎಂಬುದನ್ನೂ ಒತ್ತಟ್ಟಿಗಿಡೋಣ.

ಈ ಪತ್ರವನ್ನು ನಮ್ಮ ತಂದೆಯವರಿಂದ ಬರೆಸಿದ ಉದ್ದೇಶವೆಂದರೆ, ಈ ವಿಚಾರದಲ್ಲಿ ಗುರುಗಳನ್ನು ಮತ್ತು ಬ್ರಾಹ್ಮಣ ಮುಖಂಡರನ್ನು ಅವರವರ ಪಾಲಿನ ತಪ್ಪಿನಿಂದ ಬಚಾವು ಮಾಡುವುದು ಹಾಗೂ ಪುರೋಹಿತರಿಗೆ ಮತ್ತು ನೆಂಟರಿಷ್ಟರಿಗೆ 'ಸಮಾಧಾನ' ಹೇಳುವುದು ಎಂಬುದು ಸ್ಪಷ್ಟವಾಗಿದೆಯಲ್ಲವೆ?

ಆದರೆ ಇಷ್ಟೆಲ್ಲ ಮಾಡಿಯೂ ಸಹ, ನಮ್ಮ ತಂದೆಯವರ ಮೇಲೆ ಒತ್ತಡ ಹೇರಿ ಪ್ರಾಯಶ್ಚಿತ್ತಕ್ಕೆ ಮಣಿಸಿದ್ದನ್ನು ಮುಚ್ಚಿಡಲು ಇವರುಗಳಿಗೆ ಸಾಧ್ಯವಾಗಿಲ್ಲ. ಆ ಎಲ್ಲ ಹೇಸಿಗೆಗಳಿಗೆ ಇವರುಗಳ ಈ ಪತ್ರವೇ ದಾಖಲೆಯನ್ನು ಒದಗಿಸಿಬಿಟ್ಟಿದೆ. ಸರಿಯಾಗಿ ಗಮನಿಸಿ ನೋಡಿ. ಅಂಥದೆಲ್ಲ ನಡೆಯದಿರುತ್ತಿದ್ದರೆ 'ತಮ್ಮ ಪತ್ನಿಯ ಮತ್ತು ಸೊಸೆಯಂದಿರ ಮನಃ ಶಾಂತಿಗಾಗಿ ಹಾಗೂ ನೆಂಟರಿಷ್ಟರು ಬಂದು ಹೋಗುವಂತೆ ಮಾಡಲು ಏನಾದರೊಂದು ಪರಿಹಾರ' ಹುಡುಕಲು ನಮ್ಮ ತಂದೆ ಮಠಕ್ಕೆ ಶರಣಾಗುತ್ತಿರಲಿಲ್ಲ ಎಂಬುದು ಅದರಲ್ಲಿ ಸ್ಪಷ್ಟವಾಗಿದೆ. ಅವರು ಸಮಾಜದಿಂದ ದೂರಾಗಲು ಬಯಸಿರಲಿಲ್ಲ, ನಿಜ. ಆದರೆ ಶರಣಾಗುತ್ತಲೂ ಇರಲಿಲ್ಲ ಎಂಬುದೂ ಅಷ್ಟೇ ಸತ್ಯ. ಇದಕ್ಕೆ, ಈ ಮುಖಂಡರುಗಳು 6 ತಿಂಗಳ ಕಾಲ ಇಷ್ಟೆಲ್ಲ ಗುಲ್ಲೆಬ್ಬಿಸಬೇಕಾಯಿತೆಂಬುದೇ ಸಾಕ್ಷಿ.

ಅಲ್ಲದೆ ಮಕ್ಕಳನ್ನು ಕೂಡ ಅವರಾಗಿಯೇ ಮನೆಯಿಂದ ಬಹಿಷ್ಕರಿಸಿರುವುದಲ್ಲ ಎಂಬುದೂ ಅದರಲ್ಲಿ ಸ್ಪಷ್ಟವಾಗುತ್ತದೆ. ಹಾಗೆ ಮಾಡುವುದಾದರೆ ಅದಕ್ಕಾಗಿ ಅವರು 6 ತಿಂಗಳು ಕಾಯಬೇಕಾಗಿರಲಿಲ್ಲ. (ಶೃಂಗೇರಿ ತಾ||ನಲ್ಲಿ ಈ ಹಿಂದೆ ನಡೆದ ಇಂಥ ಒಂದು ವಿವಾಹದ ಸಂದರ್ಭದಲ್ಲಿ ಅಲ್ಲಿಂದಲ್ಲಿಗೇ ಮಗಳ ಬಹಿಷ್ಕಾರ ಮತ್ತು ಪ್ರಾಯಶ್ಚಿತ್ತ ಮುಗಿದು ಹೋಗಿತ್ತು. ಆಗ ಅಲ್ಲಿ ಹರಿಹರಪುರ ಗುರುಗಳು ಖುದ್ದು ಹಾಜರಿದ್ದರಂತೆ.)

ಒಟ್ಟಾರೆ ಇಷ್ಟೇ. ನಾವೇನೂ ಇಂಥದೊಂದು ವಿಚಾರವನ್ನು ಬೆಂಬಲಿಸಿ ಎಂದು ಯಾರನ್ನೂ ಕೇಳಿಕೊಂಡು ಹೋಗಿರಲಿಲ್ಲ. (ಮದುವೆ ಆದ ಬಗ್ಗೆ ಒಂದು ಸುದ್ದಿ ಕೂಡ ಪ್ರಕಟಿಸಿರಲಿಲ್ಲ) 5 ತಿಂಗಳಿಗೂ ಹೆಚ್ಚು ಕಾಲ ಈ ಅಸಂಬದ್ಧಗಳನ್ನೆಲ್ಲ ಸಹಿಸಿಕೊಂಡೂ ನಮ್ಮೊಳಗೇ ಇಟ್ಟುಕೊಂಡಿದ್ದೆವು. ಇಂಥ ಮದುವೆಯನ್ನು ಒಪ್ಪಲಾರದವರು ತಮ್ಮ ಪಾಡಿಗೆ ತಾವಿದ್ದಿದ್ದರೆ ಇದನ್ನು ಪ್ರಕಟಿಸುವ ಪ್ರಮೇಯವೇ ಬರುತ್ತಿರಲಿಲ್ಲ. ಅದರಲ್ಲೂ, ನಮ್ಮ ವೃದ್ಧ ತಂದೆ-ತಾಯಿಗಳಿಗೆ ಹಿಂಸೆ ಕೊಡುವುದು ಮಾತ್ರವಲ್ಲ, **ಬೇರೆಯವರು ಇಂಥ ಕೆಲಸಕ್ಕೆ (ಅಂತರ್ಜಾತಿ ಮದುವೆಗೆ) ಧೈರ್ಯ ಮಾಡದಂತೆ ಭಯ ಮೂಡಿಸಲು (ಭಯೋತ್ಪಾದನೆ!?) ಹೀಗೆ ಮಾಡುತ್ತಿದ್ದೇವೆಂದು** ಅವರು ಪ್ರಕಟಿಸಿದಾಗ, ಇದು ಖಂಡಿತ ನಾಡಿನ ಎಲ್ಲೆಡೆ ಬಹಿರಂಗವಾಗಬೇಕು ಎಂದು ನನಗನ್ನಿಸಿತು.

ಮನೆ-ಮಾರು, ನದಿ-ದಡ, ಧರ್ಮ-ಕಟ್ಟುಪಾಡು ಎಂದೆಲ್ಲ ರೀಲು ಬಿಡುವವರೆಲ್ಲ ಸ್ವಲ್ಪ ಸರಿಯಾಗಿ ಯೋಚಿಸಬೇಕು.

ಹರಿಹರಪುರ ಗುರುಗಳು ಈ ಕೆಲಸ ಮಾಡಿಸಿದ್ದೆಂದು ನಾವೆಲ್ಲೂ ಆಪಾದಿಸಿಲ್ಲ. ಇಡೀ ಜಾತಿಯವರೆಲ್ಲರೂ ಮಾಡಿದ್ದೆಂದೂ ಹೇಳಿಲ್ಲ. ಕೆಲವೇ ಮಂದಿ 'ಮುಖಂಡ'ರೆಂದು ಕೊಳ್ಳುವ **ಕಂತ್ರಿಗಳು** ತಮ್ಮ ಸ್ವಂತದ ಉದ್ದೇಶಗಳಿಗಾಗಿ ಇದನ್ನು ಮಾಡಿದ್ದು ಎಂದೇ ಹೇಳಿದ್ದೇವೆ. ಇದರಲ್ಲೇನೂ ಸುಳ್ಳಿಲ್ಲ. ಆದರೆ ಈ ವಿಚಾರ ಪೂರ್ತಿ ಗುರುಗಳಿಗೆ ಗೊತ್ತಿತ್ತು; ಈಗಿನ ಕಾಲಕ್ಕೆ ಸರಿಹೊಂದದ ಹಾಗೂ ಯಾವುದೇ ಕಾಲಕ್ಕೂ ಕ್ರೂರ ಮತ್ತು ಹೇಯವಾದ ಇಂಥದನ್ನು ತಡೆಯುವುದು ಅವರ ಪೀಠದ ಕರ್ತವ್ಯವಾಗಿತ್ತು ಎಂಬುದನ್ನಷ್ಟೇ ಅವರಿಗೆ ನಾವು ಹೇಳಿದ್ದು.

ಇದನ್ನು ಅವರಿಗೆ ಮನವರಿಕೆ ಮಾಡಿಕೊಟ್ಟು, ಈ ಹೇಸಿಗೆಯನ್ನು ತಪ್ಪಿಸಲೆಂದೇ ನಾವು ಸಂದರ್ಶನ ಮಾಡಿದ್ದು. ಇದನ್ನು ಒಬ್ಬ ಪ್ರಮುಖ ವಿಶ್ವ ಹಿಂದೂ ಪರಿಷತ್ ಮುಖಂಡರಿಗೂ ತಿಳಿಸಿಯೇ ಸಂದರ್ಶನಕ್ಕೆ ಹೋಗಿದ್ದೆವು. ಅಷ್ಟೇ ಹೊರತು, ಗುರುಗಳಿಗೆ ನಾವೇನೂ ಬೈದಿಲ್ಲ, ಹೀಯಾಳಿಸಿಲ್ಲ, ತೇಜೋವಧೆ ಮಾಡಿಲ್ಲ. ಟೀಕೆಗೊಳಗಾಗಬಾರದೆಂದಿರುವವರು ಇಂಥ ಟೀಕಾಸ್ಪದವಾದ ಹೇಸಿಗೆಗೆ ಇಳಿಯಲೂಬಾರದು.

ಇಲ್ಲಿ ಇವರುಗಳು ನಮ್ಮ ತಂದೆಗೆ ಅಲಿಖಿತ ಬಹಿಷ್ಕಾರ ಹಾಕಿದ್ದು ಜಾತಿಯಿಂದಲಾದ್ದರಿಂದ ಜಾತಿಯ ಹೆಸರು ಹೇಳುವುದು ಅನಿವಾರ್ಯವಾಯಿತು ಹೊರತು ಯಾವುದೇ ಜಾತಿಯನ್ನೂ ಅನಗತ್ಯವಾಗಿ ಹೀಯಾಳಿಸುವುದು ನನ್ನ ಉದ್ದೇಶವಲ್ಲ. ಇನ್ನು ಟೀಕೆಗಳಲ್ಲಿ 'ಮೇಲ್ಜಾತಿ' ಎಂದಾಗ ಬರೀ ಬ್ರಾಹ್ಮಣರು ಮಾತ್ರ ಅಲ್ಲ; ಅನೈತಿಕ ಸಂಬಂಧಗಳ ಆರೋಪವೂ ಅಷ್ಟೆ.

ಒಂದು ಹೊಸ ವಿಚಾರ ನಮಗೆ ಎದುರಾದಾಗ ಸಹನೆಯಿಂದ ಪರಿಶೀಲಿಸಬೇಕು. ಅದು ನಮಗೆ ಪೂರ್ತಿ ಜೀರ್ಣವಾಗದಿದ್ದರೆ ಬಿಟ್ಟುಬಿಡೋಣ. ಆದರೆ ಆ ವಿಚಾರವನ್ನೇ ಹತ್ತಿಕ್ಕುವ, ಅಂಥ ಹೆಜ್ಜೆ ಇಡುವವರನ್ನು ತುಳಿಯುವ ಇಂಥ ಪ್ರಯತ್ನಗಳು ಒಂದಷ್ಟು ಗೊಂದಲವನ್ನುಂಟುಮಾಡಬಹುದೇ ಹೊರತು ವಿಚಾರ ಸಾಯುವುದಿಲ್ಲ. ತಪ್ಪು ವಿಚಾರವಾದರೂ ಸಹ ಅದನ್ನು ವೈಚಾರಿಕವಾಗಿಯೇ ಸೋಲಿಸಬೇಕಾಗುತ್ತದೆ; ಆ ವಿಚಾರ ಇಟ್ಟುಕೊಂಡವರನ್ನೆಲ್ಲ ಉಸಿರು ಗಟ್ಟಿಸಿ ಸಾಯಿಸುವುದಲ್ಲ— ಹಿಟ್ಲರನಂತೆ.

ಕೊನೆಯದಾಗಿ— 'ಜಾತಿ ಶ್ರೇಷ್ಠರು' ಎಂದು ನಾನು ಬಳಸುವುದು 'ನಾವೇ ಶ್ರೇಷ್ಠ ಜಾತಿ' ಎಂದು ಹಿಟ್ಲರನಂತೆ ಪ್ರತಿಪಾದಿಸುವ ಎಲ್ಲರ ಬಗ್ಗೆ ಹೊರತು ಶ್ರೇಷ್ಠ ಜಾತಿಯವರಾದ ಬ್ರಾಹ್ಮಣರು ಎಂಬ ಅರ್ಥದಲ್ಲಲ್ಲ. ನಾನೆಂದೂ ಯಾವ ಜಾತಿಯನ್ನೂ ಶ್ರೇಷ್ಠವೆಂದು ತಿಳಿಯುವುದಿಲ್ಲ, ನಿಕೃಷ್ಟವೆಂತಲೂ ತಿಳಿಯುವುದಿಲ್ಲ. ಇಡಿಯಾಗಿ ಶ್ರೇಷ್ಠವೆನ್ನಿಸಿಕೊಳ್ಳುವ ಯಾವುದೇ ಜಾತಿಯೂ ಇರಲು ಸಾಧ್ಯವಿಲ್ಲ. ಆದರೆ ಹಾಗೆ ವಾದಿಸುವವರು ಮಾತ್ರ, ಹಿಟ್ಲರ್‌ನಂತೆ ಮನುಷ್ಯನ ಇತಿಹಾಸದಲ್ಲೇ ಅತ್ಯಂತ ಹೀನವಾದೊಂದು 'ಜಾತಿ'ಗೆ ಸೇರಿ ಹೋಗುತ್ತಾರೆ.

* * *

ಇಲ್ಲಿಗೆ ಈ ಸಂವಾದವನ್ನು ಮುಕ್ತಾಯಗೊಳಿಸೋಣವೆ? ಇನ್ನೂ ಈ ಚರ್ಚೆಯನ್ನು ಸರಿಯಾದ ದೃಷ್ಟಿಕೋಣದಿಂದ **ಅರ್ಥಮಾಡಿಕೊಳ್ಳಲು ಬಯಸದವರನ್ನು** ಅವರ ಪಾಡಿಗೆ ಬಿಟ್ಟುಬಿಡೋಣ. ಮತ್ತೇನೂ ದಾರಿಯಿಲ್ಲ. ಅಲ್ಲವೆ?

ವಂದನೆಗಳು.

—ಸಿರಿಮನೆ ನಾಗರಾಜ್.

ಹಂದಿ ಸಾಕಣೆ ಕೇಂದ್ರವನ್ನು ಮಣ್ಣುಗೂಡಿಸಿದ ಗ್ರಾಮೀಣ ಬ್ಯಾಂಕ್

(1ನೇ ಪುಟದಿಂದ)

ನಡೆಸಿ, ಆರೋಪ ಸಾಬೀತಾದಲ್ಲಿ ನಿರ್ದಾಕ್ಷಿಣ್ಯವಾಗಿ ವಜಾ ಮಾಡಲಾಗುತ್ತದಂತೆ. ಈಗಾಗಲೇ ಇಬ್ಬರನ್ನು ಈ ರೀತಿ ಮಾಡಲಾಗಿದೆ.

ಹಾಗೆ ಈ ಶಾಖೆಯ ಈ ಅವ್ಯವಹಾರದ ಬಗೆಗೂ ಕೇಂದ್ರ ಕಚೇರಿಗೆ 1986ರ ನವೆಂಬರಿನಲ್ಲೇ ವರದಿಗಳು ಬರತೊಡಗಿದ್ದುವೆಂದೂ, ಆದರೂ ಅವನ್ನು ಬಹಳ ಗುಟ್ಟಾಗಿಟ್ಟು, ಆತನನ್ನು ಇನ್ನೂ ರಕ್ಷಿಸಲಾಗುತ್ತಿದೆಯೆಂದೂ ಕೇಂದ್ರ ಕಚೇರಿಯ ಮೂಲಗಳು ತಿಳಿಸಿವೆ.

ಛೇರ್ಮನ್ ಬೆಂಗಾವಲು

ಡಾ|| ಪರಮೇಶ್ವರಪ್ಪ ಪತ್ರಗಳಿಗೆ ಸಹಿ ಹಾಕಿಸಿದ ಸಂಗತಿ ಬಯಲಾದಾಗ, ಮ್ಯಾನೇಜರ್ ಹತ್ತಿರ ಉಪಾಯವಾಗಿ ಅದನ್ನು ತೆಗೆದುಕೊಂಡು ಬಂದು ಬಿಡಿಒಗೆ ಒಪ್ಪಿಸಿದರೆಂದೂ ಮ್ಯಾನೇಜರ್ ಹಿಂದೆಯೇ ಬಂದು, ಆ ಪತ್ರಗಳಿಗೆ ತಾರೀಕು ಹಾಕಿ ಕೊಡುವ ನೆಪದಲ್ಲಿ ಅವನ್ನೆತ್ತಿಕೊಂಡು ಓಡಿ ಹೋಗಲೆತ್ನಿಸಿದರೆಂದೂ ಆಗ ಕಚೇರಿಯ ಸಿಬ್ಬಂದಿ ಅವರನ್ನು ಅಡ್ಡಗಟ್ಟಿ ದಾಖಲೆಗಳನ್ನು ಪುನಃ ವಶಪಡಿಸಿಕೊಂಡರೆಂದೂ ತಿಳಿದು ಬಂದಿದೆ.

"ಬ್ಯಾಂಕಿನಿಂದ ಹೀಗೆಲ್ಲ ದಾಖಲೆಗಳನ್ನು ದರೋಡೆ ಮಾಡಿದರೆ ಬ್ಯಾಂಕ್ ನಡೆಸುವುದು ಹೇಗೆ?" ಎಂದು ಅಚ್ಯುತ ಪೈ ಬೆದರಿಕೆ ಹಾಕಿದರೆಂದೂ ಹೇಳಲಾಗಿದೆ.

ಹೀಗೆ ಸಹಿ ಹಾಕಿಸಿಕೊಂಡ ನಂತರ ಆ ದಾಖಲೆಗಳಲ್ಲಿ ಮ್ಯಾನೇಜರ್ ಹಲವು ಲೆಕ್ಕಾಚಾರಗಳನ್ನು ನಮೂದಿಸಿರುವುದಾಗಿ ಪರಮೇಶ್ವರಪ್ಪ ಹೇಳುತ್ತಾರೆ. ಅವುಗಳಲ್ಲಿ ಸಹ ಪುನಃ ವ್ಯತ್ಯಾಸಗಳಿವೆ ಎನ್ನಲಾಗಿದೆ. ಅವುಗಳಿಗೆ ತಾರೀಖನ್ನು 4.7 87 ಎಂದು ನಮೂದಿಸಲಾಗಿದೆ!

ಒಟ್ಟಿನಲ್ಲಿ, ರಾಜ್ಯದ ಉತ್ತಮ ಗ್ರಾಮೀಣ ಬ್ಯಾಂಕ್‌ಗಳ ಪೈಕಿ ಒಂದೆಂದು ಹೆಸರುಗಳಿಸಿರುವ **ಚಿಕ್ಕಮಗಳೂರು-ಕೊಡಗು ಗ್ರಾಮೀಣ ಬ್ಯಾಂಕಿಗೆ ಗ್ರಾಮೀಣ ಅಭಿವೃದ್ಧಿ ಯೋಜನೆಗಳೆಲ್ಲ ಬಹುಶಃ ಅಂಕಿ-ಅಂಶಗಳಲ್ಲಿ ಮಾತ್ರ ಇದ್ದರೆ ಸಾಕೆಂಬ ಅನುಮಾನ ಈ ಪ್ರಕರಣದಿಂದ ಉಂಟಾಗಿದೆ. ಇಲ್ಲವಾದರೆ, ಅತ್ಯುತ್ತಮ ರೀತಿಯ ವ್ಯವಸ್ಥೆಯೊಂದಿಗೆ ಆರಂಭಿಸಲಾಗಿದ್ದ ಈ ಯೋಜನೆಯನ್ನು ಈ ಬ್ಯಾಂಕು ಹೀಗೆ ಮಣ್ಣುಗೂಡಿಸುತ್ತಿರಲಿಲ್ಲ.**

ಪಶುವೈದ್ಯರ ಅಮಾನತಿಗೆ ಶಿಫಾರ್ಸು

ಈ ಬಾರಿಯ 20 ಅಂಶದ ಸಭೆಗೆ ದೂರು ತಂದಿದ್ದ ಫಲಾನುಭವಿಗಳಿಂದ ಸವಿವರ ಹೇಳಿಕೆ ಪಡೆದಿರುವ ಗೋವಿಂದಗೌಡರು ಡಾ|| ಪರಮೇಶ್ವರಪ್ಪ ಅವರನ್ನು ಅಮಾನತಿನಲ್ಲಿಟ್ಟು ತನಿಖೆ ಏರ್ಪಡಿಸುವಂತೆ ಪಶುಸಂಗೋಪನಾ ಸಚಿವರಿಗೆ ಶಿಫಾರ್ಸು ಮಾಡಿದ್ದಾರೆ.

ಇದೆಲ್ಲದರ ನಡುವೆ, ಕಡೇ ಪಕ್ಷ 16 ದಲಿತ ಕುಟುಂಬಗಳಿಗಾದರೂ ಒಂದು ಆಶಾದೀಪವಾಗಬಹುದಾಗಿದ್ದ ಈ ಯೋಜನೆಯು, ನಮ್ಮ ಸಮಾಜದ ಆಲೋಚನೆಯ ಸೂತ್ರ ಹಿಡಿದಿರುವ ವರ್ಗಗಳು ಪೋಷಿಸಿಕೊಂಡೇ ಬರುತ್ತಿರುವ ಶ್ರಮಿಕ ವಿರೋಧಿ ಧೋರಣೆಯಿಂದಾಗಿ, ಬಹುಶಃ ಇನ್ನೊಮ್ಮೆ ತಲೆ ಎತ್ತಲಾರದಂತೆ ನೆಲ ಕಚ್ಚಿದ ದುರಂತ ಮಾತ್ರ ಪ್ರಜ್ಞಾವಂತರ ಎದೆ ಕರಗಿಸುತ್ತದೆ.

ವೇದಿಕೆ

ಓದುಗರ ಪ್ರತಿಕ್ರಿಯೆಗಳು

28. ಜಾತಿಯೇ ಇಲ್ಲದ ಸನ್ಯಾಸಿಗಳು ಜಾತಿ ಮುಖಂಡರಾಗುವ ವಿಪರ್ಯಾಸ

ಪ್ರಿಯ ನಾಗರಾಜರಿಗೆ,

ನಿಮ್ಮ ಪತ್ರಿಕೆಯಲ್ಲಿ ಬಹಿಷ್ಕಾರದ ಬಗ್ಗೆ ಬರೆದದ್ದನ್ನು ಓದಿದೆ. ಸಂಪಾದಕರ ವೈಯಕ್ತಿಕ ಸಂಕಟಗಳಿಗೆ ಪತ್ರಿಕೆಯಲ್ಲಿ ಜಾಗವಿರಬಾರದೆಂಬ ನಿಯಮವನ್ನೂ ಮೀರಿ ಅದು ಪ್ರಕಟವಾಗಬೇಕಾದರೆ ತುಂಬ ತೀವ್ರವಾದದ್ದಿರಬೇಕೆನಿಸಿತು. ಆದರೆ ನಿಮ್ಮ ತಳಮಳಕ್ಕೆ ನಿಜವಾದ ಕಾರಣವೇನು? ಬಹಿಷ್ಕಾರ ಹಾಕಿದ್ದೋ, ತೆಗೆದದ್ದೋ ಅಥವಾ ನಿಮ್ಮ ಹಿರಿಯರಲ್ಲಿ ಧರ್ಮಸಂಕಟ, ಕುಟುಂಬದಲ್ಲಿ ಒಡಕು ಮೂಡಿದ್ದೋ?

ಧರ್ಮವು ಹೊರಗಿನದ್ದಾದ, ಹೊಂದಬಹುದಾದ(having) ಒಂದು ವಸ್ತು ಎಂದು ಇವರೆಲ್ಲ ಭಾವಿಸುತ್ತಾರೆ. ಮತಾಂತರ, ಬಹಿಷ್ಕಾರ ಮುಂತಾದುವೆಲ್ಲ ನಡೆಯುವುದು ಇದರಿಂದಲೇ. ಗುಣಕರ್ಮಗಳಿಂದ ನಿಯಮಿತವಾಗದ, ಇರುವಿಕೆ (being) ಆಗಿ ಅನುಭವಕ್ಕೆ ಬರದ ಜಾತಿ–ಧರ್ಮವು ಹುಟ್ಟಿನಿಂದ ಬರುವ ಆಸ್ತಿ ಹಕ್ಕಿನಂತಹುದೇ.

ಸಮಾಜ ತನಗೆ ಹೊಂದದ ಕಾರ್ಯಮಾಡಿದವರನ್ನು ಹೀನೈಸುವ ವಿಧಾನ ಅಥವಾ ಶಿಕ್ಷೆ ಈ ಬಹಿಷ್ಕಾರ. ದಂಡದಿಂದ ವ್ಯಕ್ತಿಯ ಆಸ್ತಿಯನ್ನು, ಜೈಲಿನಿಂದ ಸ್ವಾತಂತ್ರ್ಯವನ್ನು, ಪೆಟ್ಟಿನಿಂದ ದೈಹಿಕ ಸುಖವನ್ನು ಕಡಿತಗೊಳಿಸಿದಂತೆಯೇ, "ಹೊಂದಿರುವ" ಜಾತಿಯನ್ನು ನಷ್ಟಗೊಳಿಸಬಹುದೆಂಬ ನಂಬಿಕೆ ವಿಚಿತ್ರವಾದದ್ದು.

ಸನ್ಯಾಸಿಗೆ ಜಾತಿ ಎನ್ನುವುದೇ ಇಲ್ಲವೆಂಬುವನ್ನು ಒಪ್ಪುವ ಧರ್ಮದಲ್ಲಿ ಆತನೇ ಜಾತಿಗೆ ಮುಖಂಡನಾಗುವುದೆಂಥ ವಿಪರ್ಯಾಸ! ಹರಕೆಯ, ವ್ಯಾಪಾರ, ನರಕದ ಹೆದರಿಕೆ, ಸ್ವರ್ಗದ ಆಸೆಗಳಿಂದ ಹರಿದು ಬರುವ ಹಣದಿಂದ ಜೀವಿಸುವ ವಿರಾಗಿಗಳು ತಮ್ಮದೂ ಒಂದು ಜೀವನ ವಿಧಾನ ಎಂಬುವನ್ನು ಮರೆತು ಮುಕ್ತಿಗೆ ಬಾಗಿಲುಗಳಾಗಬಯಸುತ್ತಾರೆ. ದೇವರಲ್ಲಿ ಪೂರ್ಣ ನಂಬಿಕೆಯಿಲ್ಲದೆ, 'ನೀನು ನನಗೆ ಈ ಕಷ್ಟದಿಂದ ಪಾರುಮಾಡು, ಅನಂತರ ಮಾತ್ರ ಈ ಕೈಯಲ್ಲಿ ಹಿಡಿದ ಹರಕೆಯ ಕಾಣಿಕೆ ಕಟ್ಟುತ್ತೇನೆ' ಎಂಬಂತಹ post-dated cheque ನ ವ್ಯವಹಾರ ಮಾಡುವ ಜನ ಇವರ ಉದ್ಧರಣೆಯ ನೀರಿಗೆ, ಆಶೀರ್ವಾದಕ್ಕೆ ಹಪಹಪಿಸುವುದರಲ್ಲಿ ಆಶ್ಚರ್ಯವಿಲ್ಲ.

ಮೇಲ್ ಜಾತಿಯ ಗಂಡುಗಳು ಕೆಳಜಾತಿಯ ಹೆಣ್ಣುಗಳಿಗೆ ಗರ್ಭದಾನ ಮಾಡಿ ಕೇವಲ ಜನಿವಾರ ಬದಲಿಸಿ ಶುದ್ಧರಾಗಬಹುದಾದ ಸಮಾಜದಲ್ಲಿ ಸ್ವಜಾತಿಯ ಹೆಣ್ಣುಗಳಿಗೆ ಆ ಸ್ವಾತಂತ್ರ್ಯ ಕೊಡದಿರುವುದರಲ್ಲಿ ಅರ್ಥವಿದೆ. ಮೊದಲಿನದು ದಾನ, ಎರಡನೆಯದು ತನ್ನ ರಕ್ತಮಾಂಸವನ್ನೇ ಹಂಚಬೇಕಾದ ಸ್ವೀಕರಣ, ಸ್ತ್ರೀ ಆಸ್ತಿಯಾಗಿರುವ ಸಮಾಜದಲ್ಲಿ ಇದಕ್ಕೆ ಆಸ್ಪದವಿಲ್ಲ. ಗೀತೆಯಲ್ಲೇ 'ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣ ಸಂಕರಃ' ಎಂದಿದೆ!

ಬಸವಣ್ಣನಂತಹವರಿಗೂ ಕ್ರಾಂತಿಯ ಈ ಘಟ್ಟವನ್ನು ಅರಗಿಸಲಾಗದೆ ಜೀವನ ಕೊನೆಗೊಳಿಸಿಕೊಳ್ಳಬೇಕಾಯ್ತು. ನೀವು ಈ ಮಟ್ಟಕ್ಕೆ 'ಇಳಿ'ದಿದ್ದನ್ನು ಸಮಾಜ ನಿಧಾನವಾಗಿ ಒಪ್ಪಿಕೊಳ್ಳುತ್ತಿರುವುದು ಅದರ ಸ್ತರ ಮೇಲಿನ ಮುದುಕರಿಗೆ ಸಹಿಸಲಾಗದಿರುವುದು ಸಹಜವೇ.

ಮಠಗಳಿಗೆ ತಳಕು ಹಾಕಿಕೊಂಡು ಸಂಘಟನೆಗೆ ಹೊರಡುವ ವಿಶ್ವಹಿಂದೂಪರಿಷತ್ ಮೊದಲಾದವುಗಳ ಕೆಲಸದ ಬಗ್ಗೆ ಒಂದು ಕತೆ ನೆನಪಿಗೆ ಬರುತ್ತೆ. ರಾತ್ರಿ ಕಾಶಿಯಿಂದ ಗಂಗೆಯಲ್ಲಿ ಪ್ರಯಾಣ ಹೊರಟ ನಾಲ್ವರು ಬೆಳತನಕ ಹುಟ್ಟುಹಾಕಿದರಂತೆ. ಬೆಳಿಗ್ಗೆ ಕಣ್ಣುಜ್ಜಿ ನೋಡಿದರೆ ಇನ್ನೂ ಕಾಶಿಯಲ್ಲೇ ಇದ್ದಾರೆ! ಏನು ಪರಾತ ಏನು ಎಂದು ದಡದಲ್ಲಿಳಿದು ನೋಡಿದರೆ ಘಟ್ಟಕ್ಕೆ ಕಟ್ಟಿದ್ದ ಹಗ್ಗ ಬಿಚ್ಚಿಯೇ ಇಲ್ಲ! (4ನೇ ಪುಟಕ್ಕೆ)

29. "ಜಾತ್ಯತೀತ ಮದುವೆ ಸ್ವಾಗತಾರ್ಹ; ಸ್ವಾಮೀಜಿ ಬಗ್ಗೆ ಬರೆದುದು ಸರಿ ಕಾಣಲಿಲ್ಲ"

ಮಾನ್ಯರೆ,

'ಜಾತ್ಯತೀತ ಮದುವೆ'—ಇದನ್ನು ನಾನು ಸ್ವಾಗತಿಸುತ್ತೇನೆ. ಈ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪುರವರ ವಿಶ್ವಮಾನವ ಸಂದೇಶ ನನ್ನ ನೆನಪಿಗೆ ಬರುತ್ತಿದೆ. ಮನುಷ್ಯ ಜಾತಿಯೆಲ್ಲ ಒಂದೇ ಎಂಬ ಸತ್ಯವನ್ನು ಜಗತ್ತಿಗೆ ತೋರಿಸಿಕೊಟ್ಟ ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಅನಿಕೇತನ ಎಂಬ ಸುಪ್ರಸಿದ್ಧ ವಿಶ್ವಮಾನವ ತತ್ವವನ್ನು ಪ್ರಪಂಚಕ್ಕೆ ನೀಡಿ, 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದನ್ನು ತಿಳಿಸಿ, ವಿಶ್ವದ ಎದುರು ಈಗ ಇರುವ ಎರಡೇ ದಾರಿಗಳಾದ ಸರ್ವ ನಾಶ ಬೇಕಿಲ್ಲವಾದರೆ ವಿಶ್ವಮಾನವರಾಗುವುದೊಂದೇ ನಮಗಿರುವ ದಾರಿ ಎಂಬುದನ್ನು ಸಾರಿ, ವಿನಾಶದತ್ತ ಸಾಗುವ ಮನುಜ ಕುಲಕ್ಕೆ ದಾರಿದೀಪವಾಗಿದೆ ಈ ವಿಶ್ವಮಾನವ ಸಂದೇಶ.

ಜಾತ್ಯತೀತ ಮದುವೆಯಿಂದ ನೀವುಗಳು ವಿಶ್ವಮಾನವರಾಗಿದ್ದೀರಿ. ಅದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ.

ಆದರೆ ಹರಿಹರಪುರ ಮಠಾಧೀಶರೊಂದಿಗೆ ಒಂದು ವಿಶಿಷ್ಟ ಸಂದರ್ಶನ ಎಂದು ತಾವು ಪ್ರಕಟಿಸಿರುವುದು ನನ್ನ ದೃಷ್ಟಿಯಲ್ಲಿ ಸರಿ ಕಾಣಲಿಲ್ಲ.

ಸ್ವಾಮೀಜಿಯವರು ತಮ್ಮ ಸಂಪೂರ್ಣ ಜೀವಿತವನ್ನು ಸಮಾಜದ ಒಳಿತಿಗಾಗಿ ಮುಡಿಪಾಗಿ ಇಟ್ಟವರು. ವ್ಯಕ್ತಿಗಳನೇಕರು ಇಟ್ಟ ಹೆಜ್ಜೆಯ ಗುರುತುಗಳು ಹೇಳಿಕೊಳ್ಳುವ ರೀತಿಯಲ್ಲಿ ಮೂಡುವುದು ಇಂದಿನ ಸಂಕೀರ್ಣ ಬದುಕಿನಲ್ಲಿ ದುರ್ಭರವಾಗಿರುವಾಗ, ಸಮಾಜದ ಒಳಿತಿಗಾಗಿ ದುಡಿಯುತ್ತಿರುವ ಸ್ವಾಮೀಜಿಯವರ ವಿಚಾರದಲ್ಲಿ ತಾವು ಬರೆದಿರುವ ರೀತಿ ನನಗೆ ಸರಿ ಕಾಣಲಿಲ್ಲ.

—ವಿ.ಗ. ಶ್ರೀನಿವಾಸ್
ಅತ್ತಿಸರು.

30. "ಕರುಳ ಸಂಬಂಧಗಳನ್ನು ಯಾವ ಶಕ್ತಿಯೂ ಕತ್ತರಿಸಲಾಗದು"

ಗೆಳೆಯ ನಾಗರಾಜ್,

ನಿಮ್ಮ ಸಹೋದರಿಯ ಮದುವೆಯ ಕಾರಣಕ್ಕಾಗಿ ನಡೆದ ಬಹಿಷ್ಕಾರ, ಪ್ರಾಯಶ್ಚಿತ್ತ, ಶುದ್ಧೀಕರಣಗಳ ವಿಷಯವನ್ನು ನಿಮ್ಮ ಪತ್ರಿಕೆಯಲ್ಲಿ ಬರೆದಿರುವುದರಿಂದ, 'ಇದೊಂದು ಖಾಸಗಿ ವಿಷಯ ಹಾಗೂ ಅವರ ಮನೆಯ ವಿಷಯ' ಎಂದು ಅನೇಕರು ಹೇಳಬಹುದು. ಆದರೆ ಒಬ್ಬ ಸಾರ್ವಜನಿಕ ವ್ಯಕ್ತಿಯಾದ ಮಠಾಧೀಶರು ಖಾಸಗಿ ವ್ಯಕ್ತಿಯ (ಅಥವಾ ಒಂದು ಖಾಸಗಿ ಕುಟುಂಬದ) ವೈಯಕ್ತಿಕ ಜೀವನದಲ್ಲಿ ಹೀಗೆ ಮಾನಸಿಕ ಹಿಂಸೆಗೆ ಕಾರಣರಾಗಿರುವುದನ್ನು ಅವರ ಗಮನಕ್ಕೆ ಎತ್ತಿ ತೋರಿಸಬಯಸುತ್ತೇನೆ.

"ಒಬ್ಬ ಸಾರ್ವಜನಿಕ ವ್ಯಕ್ತಿಯ ಖಾಸಗಿ ಜೀವನ **ನಮ್ಮ**–ನಿಮ್ಮ ಜೀವನದ **ಮೇಲೆ** ದುಷ್ಪರಿಣಾಮ ಮಾಡದಿರುವಷ್ಟು ಕಾಲ ಆತನಿಗೂ **ಖಾಸಗಿ** ಜೀವನದ ಹಕ್ಕಿದೆ. ಆದರೆ ನಮ್ಮ **ತಿಳಿಯುವ** ಹಕ್ಕು ಸಾರ್ವಜನಿಕ ವ್ಯಕ್ತಿಗೆ ಖಾಸಗಿ ಜೀವನ ನಡೆಸಲು ಇರುವ ಹಕ್ಕಿಗಿಂತ **ದೊಡ್ಡದು**".

ಆದುದರಿಂದ **ಈ** ಮೇಲಿನ ಯಾವುದೇ ಚರ್ಚೆಯೇ ಇಲ್ಲಿ **ಇನ್ನು** ಅಗತ್ಯವಿಲ್ಲ ಎನ್ನಬಹುದು.

ಅದೂ ಅಲ್ಲದೆ, **ಈ**ಗಿನ ಮಠಾಧೀಶರ ಪಾತ್ರವನ್ನು **ನೋಡಿದರೆ** ಅವರು ಕೇವಲ **ಒಂದು ಜಾತಿಯ ಮುಖಂಡರು ಮಾತ್ರ** ಎಂದು ಹೇಳಬಹುದು.

ನಿಮ್ಮ ತಾಯಿಯವರ ನಿಲುವು ನಿಜವಾಗಿಯೂ ಮೆಚ್ಚುವಂತಹುದು. "ನಿಜವಾದ ತಾಯಿಯು ನನಗಿಂತ ಸಣ್ಣ ಮಗಳಿಗೆ ಒಳ್ಳೆಯ ಗಂಡ ಸಿಗಲಿ ಎಂದು ಯಾವಾಗಲೂ ಹಾರೈಸುತ್ತಿರುತ್ತಾಳೆ" ಎಂಬ ಒಂದು ಮಾತಿದೆ. ಅದೂ ಅಲ್ಲದೆ ಆ ಕರುಳ ಸಂಬಂಧವನ್ನು ಯಾವ ಶಕ್ತಿಯೂ ಬೇರೆ ಮಾಡಲು ಸಾಧ್ಯವಿಲ್ಲ. ಏನೇ ಆಗಲಿ ನಾವು **21** ನೇ ಶತಮಾನಕ್ಕೆ ಕಾಲಿಡಲೇ ಬೇಕು.

ಈ ಮದುವೆ ಪತ್ರಿಕೆಯಲ್ಲಿ **ಚರ್ಚೆ**ಯಾಗುವಂಥ ವಿಚಾರವಾಯಿತೆಂಬುದು. ನೂತನ ದಂಪತಿಗಳ ಮೇಲೆ ಯಾವ ಮಾನಸಿಕವಾದ ಪರಿಣಾಮ ಬೀರದಿರಲೆಂದು ಹಾರೈಸುತ್ತಾ, ಅಂತರ್ಜಾತಿ ವಿವಾಹದ ವಿಚಾರಕ್ಕೆ ಹಾಗೂ ಜಾತೀಯತೆ ನಿರ್ಮೂಲನದ ಯಾವುದೇ ಸಣ್ಣ ಹೆಜ್ಜೆಗೆ ಕೂಡ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಬಯಸುತ್ತೇನೆ.

—ಹೆಗ್ಗಾರು ಜಯಂತ್,
ನಿಲುವಾಗಿಲು.

31. ತಪ್ಪನ್ನು ತಪ್ಪೆನ್ನುವುದೇ ದೊಡ್ಡ ತಪ್ಪು !

ಮಾನ್ಯರೆ,

"ನಿಮಗೆ ಅನ್ಯಾಯ ಆಗಿದ್ದರೆ ನ್ಯಾಯಾಲಯಕ್ಕೆ ಮೊರೆ ಹೋಗಿರಿ" ಎಂದು **ಈ** ಹಿಂದೆ ಬರೆದಿದ್ದ ಕಾವಳ ಲಕ್ಷ್ಮೀನಾರಾಯಣಪ್ಪನವರೇ ಇದೀಗ 5.7 87 ರ ಸಂಚಿಕೆಯಲ್ಲಿ "ನೀವು ನ್ಯಾಯಾಲಯಕ್ಕೆ ಹೋದರೆ **ಮಠ**ದಲ್ಲೇ ಕೋರ್ಟ್ ಕಲಾಪ ನಡೆಸಲು **ಮನ**ವಿ ಮಾಡುವುದಾಗಿ" ಬರೆದಿರುವುದು **ವಿಚಿತ್ರ**ವಾಗಿದೆ.

ಗುರುವನ್ನು ದೇವರೆಂದು ಪೂಜಿಸುವ ಕಾಲವೊಂದಿತ್ತು. ಆಗ ಅವರೂ ಅದೇ **ರೀತಿ** ಇಡೀ ಸಮಾಜದ ಹಿತಚಿಂತಕರಾಗಿರುತ್ತಿದ್ದರು. ಆದರೆ ಇಂದಿನ **ಕಾಲದಲ್ಲೂ** ಒಬ್ಬ ಗುರುವಿಗಾಗಿ ಮಠದಲ್ಲೇ **ಕೋರ್ಟ್** ಕಲಾಪ ನಡೆಸಲು ಸಾಧ್ಯವೆ? **ಏಕೆಂದರೆ** ಈ ಸಮಾಜದಲ್ಲಿ ಪ್ರತಿಯೊಬ್ಬ**ನೂ** ಒಂದಲ್ಲೊಂದು ರೀತಿ ಶ್ರೇಷ್ಠನೇ ಆ**ಗಿರುತ್ತಾ**ನೆ. ಹೀಗಾದರೆ ಮನೆ ಮನೆಯಲ್ಲೂ **ಕೋರ್ಟ್** ಕಲಾಪ ನಡೆಯಬೇಕಾದೀತು. (**ಭಾರತದ** ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರೇ ಕೋರ್ಟಿಗೆ ಹಾಜರಾಗಬೇ**ಕಾಯಿತೆಂಬು**ದನ್ನು ಜ್ಞಾಪಿಸಿಕೊಂಡು, ಕಾ. ಲ. **ರವರ** ಪತ್ರದಲ್ಲಿದ್ದ "ನನಗೂ ಕಾನೂನು **ಗೊತ್ತಿ**ದೆ...." ಎಂಬುದನ್ನು ಯೋಚಿಸೋಣ.)

ಎಷ್ಟೋ ವೇಳೆ, ನಾವು **ಈ** ಸಮಾಜದಲ್ಲಿ ಯಾರನ್ನು ಶ್ರೇಷ್ಠ ವ್ಯಕ್ತಿಗಳೆಂದು ತಿಳಿದಿರುತ್ತೇವೋ ಅವರು ಮಾಡುವ ತಪ್ಪುಗಳೇ ಹೆಚ್ಚಾಗಿರುತ್ತವೆ. ಆದರೆ ಅವರ ತಪ್ಪನ್ನು ತಿದ್ದಿ ಹೇಳಲು ಅವರ ಹಿಂಬಾಲಕರಿಗೆ ಅಥವಾ ಶಿಷ್ಯ ವರ್ಗಕ್ಕೆ ಧೈರ್ಯವಿಲ್ಲ. ತಮ್ಮ ಮುಖಂಡ ಅಥವಾ ಗುರುಗಳು ಮಾಡುತ್ತಿರುವುದೇ ಸರಿ ಎಂದು ವಾದಿಸಿ ಈ ಸಮಾಜವನ್ನು ಮತ್ತಷ್ಟು ದುರಂತಕ್ಕೆ ಕೊಂಡೊಯ್ಯುತ್ತಿದ್ದಾರೆ.

(4ನೇ ಪುಟಕ್ಕೆ)

ವೇದಿಕೆ

ಮುಖಂಡರಾಗುವ ವಿಪರ್ಯಾಸ

(3ನೇ ಪುಟದಿಂದ)

ಇದೇನೇ ಇರಲಿ, ನೀವು ಹೋರಾಟಕ್ಕೆ ಇಳಿದಿಲ್ಲ ಎಂದು ಭಾವಿಸುವೆ. ಬರೀ ದುಃಖ ತೋಡಿಕೊಳ್ಳುವಲ್ಲಿ, ಸಹಾನುಭೂತಿ ಸೂಚಿಸುವುದರಲ್ಲಿ ಇವೆಲ್ಲ ಮುಗಿಯಲಿ. ಸಮಾಜದ ನೂರಾರು ಚಂದಾದಾರರ ಮೇಲೆ ಅವಲಂಬಿತವಾದ ನಿಮ್ಮ ಪುಟ್ಟ ಪತ್ರಿಕೆಗೆ ರಕ್ತ ಪರಿಚಲನೆ ನಿಲ್ಲದಿರಲಿ ಎಂದು ಹಾರೈಸುವೆ.

ಪಾಂಡುರಂಗ ವಿಠಲ, ಮೈಸೂರು

(ಮೊಕ್ಕಾಂ: ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದು)

ತಪ್ಪನ್ನು ತಪ್ಪೆನ್ನುವುದೇ ದೊಡ್ಡ ತಪ್ಪು !

(3ನೇ ಪುಟದಿಂದ)

12-7-87ರ ಸಂಚಿಕೆಯಲ್ಲಿ ಕೇಶವ ಮೂರ್ತಿ, ದೇವರಮನೆ, ಇವರ ಪ್ರತಿಕ್ರಿಯೆ ಓದಿದೆ. ಬಹುಶಃ ನೀವು ಮಾಡುತ್ತಿರುವ ದೊಡ್ಡ ತಪ್ಪು ಎಂದರೆ ತಪ್ಪನ್ನು ತಪ್ಪು ಎಂದು ಹೇಳುವುದು! ಗುರುಗಳು ಮತ್ತು ಅವರ ಶಿಷ್ಯ ಮುಖಂಡರನ್ನು ಈ ರೀತಿ ಟೀಕಿಸುವುದು ತಪ್ಪು ಎಂದು ಕೇಶವ ಮೂರ್ತಿ ಹೇಳುವುದು ಸರಿ. ಏಕೆಂದರೆ ನಗು-ನಗುತ್ತಾ ಇದ್ದ ಕುಟುಂಬವನ್ನು ನುಚ್ಚು ನೂರು ಮಾಡಲೆತ್ನಿಸಿದವರಿಗೆ, ಬರೀ ಟೀಕಿಸುವುದಲ್ಲ,...........

ಈ ಇಡೀ ಪ್ರಕರಣ ಒಂದು ಅಂತರ್ಜಾತಿ ವಿವಾಹದ ಸತ್ಪರಿಣಾಮವನ್ನು ಒಂದು ಪಟ್ಟಭದ್ರ ಹಿತಾಸಕ್ತಿಯು ಹತ್ತಿಕ್ಕಲು ಯತ್ನಿಸಿದ್ದರಿಂದ ಉದ್ಭವವಾದಂಥದೆಂಬುದು ಸ್ಪಷ್ಟವಾಗಿದೆ. ಆದ್ದರಿಂದ ಇದು ನಿಮ್ಮೊಬ್ಬರ ಮನೆಯ ವಿಚಾರವಾಗಿ ಉಳಿಯಲಿಲ್ಲ, ಇಡೀ ಮಾನವ ಸಮಾಜದ ವಿಚಾರವಾಗಿದೆ. (ಗುರುಗಳು ಮತ್ತು ಅವರ ಶಿಷ್ಯ ವರ್ಗದ ಕೆಲವು ಮಂದಿಗೆ ಮಾತ್ರ ಬಹುಶಃ ಬೇಡವಾದ ಅಥವಾ ಸಹಿಸಲಾಗದ ವಿಚಾರವಾಗಿದೆ ;) ಇಲ್ಲಿ ಯಾರೂ ಬ್ರಾಹ್ಮಣ ಸಮಾಜವನ್ನು ಟೀಕಿಸುತ್ತಿಲ್ಲ. ಸಮಾಜದ ಬೆಳವಣಿಗೆಗೆ ಸಹಾಯಕವಾಗುವ ಇಂಥದೊಂದು ಕ್ರಿಯೆಯನ್ನು ವಿರೋಧಿಸುವವರನ್ನು ಟೀಕಿಸುತ್ತಿದ್ದೇವೆ.

ಧರ್ಮ ಗುರುಗಳು ಮತ್ತು ಇಂಥ ಮುಖಂಡ ವರ್ಗದವರು ಈ ಹಿಂದೆಯೂ (ಬಹು ಹಿಂದಿನಿಂದಲೂ) ಇಂಥ ಪ್ರಗತಿಪರ ನಡತೆಗಾಗಿ ಎಷ್ಟೋ ಕುಟುಂಬಗಳನ್ನು ಹಾಳು ಮಾಡಿರಬಹುದು (ದ್ದಾರೆ.) ಇಂಥದು ಇನ್ನು ಮುಂದಾದರೂ ನಡೆಯದಿರಲಿ; ಸಮಾಜದ ಏಳಿಗೆಗೆ ನಿಜವಾಗಿ ಸಹಾಯಕವಾಗುವಂಥ ಮಾರ್ಗಗಳು ಯಾವುವೆಂಬುದನ್ನು, ಕೇವಲ ಒಂದು ಜಾತಿ ಅಥವಾ ಒಂದು ವರ್ಗದ ಹಿತಾಸಕ್ತಿಯ ಸಂಕುಚಿತ ಪರಿಧಿಯಿಂದ ಹೊರ ಬಂದು ತೆರೆದ ಮನಸ್ಸಿನಿಂದ ಅರಿತುಕೊಂಡು ಆ ದಿಕ್ಕಿನಲ್ಲಿ ಶ್ರಮಿಸಲಿ-ಎಂಬುದಕ್ಕಾಗಿ ಇಷ್ಟೆಲ್ಲ ವಿಷದವಾಗಿ ಚರ್ಚಿಸುತ್ತಿದ್ದೇವೆ.

ಸಿರಿಮನೆ ರಾಮಯ್ಯನವರು 'ಶೃಂಕೊಸ' ಪತ್ರಿಕೆಯಲ್ಲಿ ನೀಡಿರುವ ಪ್ರಕಟಣೆ ಮಾನಸಿಕ ಒತ್ತಡದ ಮೇಲೆ ಬರೆದಂಥದು ಎಂಬುದು ಅದನ್ನು ಓದಿದವರಿಗೆ ಗೊತ್ತಾಗುತ್ತದೆ.

ಒಬ್ಬ ವಿದ್ಯಾರ್ಥಿ ತನಗೆ ಅನ್ಯಾಯವಾಗಿದೆಯೆಂದು ನ್ಯಾಯ ಕೇಳಿದಾಗ "ಇದು ನ್ಯಾಯಾಲಯವಲ್ಲ" ಎಂದು ಹೇಳಿ ಕಳುಹಿಸಿ, ಈಗ ಇಲ್ಲೇ ಕೋರ್ಟ್ ಕಲಾಪ ನಡೆಸಬೇಕೆಂದು ಹೇಳುತ್ತಿರುವುದು ಎಂತಹ ಹಾಸ್ಯಾಸ್ಪದ ವಿಷಯ !

ಗುರುಗಳು ಸಂದರ್ಶನದಲ್ಲಿ ಹೇಳಿರುವಂತೆ, ಮಠದ ಪಕ್ಕದಲ್ಲಿ ಹರಿಜನರಿಗೆ ನಿವೇಶನ ನೀಡಬಲ್ಲಂಥ ಯಾವುದೇ ಸರ್ಕಾರಿ ಜಾಗ ಇಲ್ಲ. ಆದರ ಬದಲು ಎಂ. ಐ. ಶ್ರೀನಿವಾಸ ಮೂರ್ತಿಯವರು ಸೂಚಿಸಿರುವ ಮಾರ್ಗ ನಿಜವಾಗಿಯೂ ಸಮಂಜಸವಾಗಿದೆ. "ಜಾತೀಯತೆ, ಅಸ್ಪೃಶ್ಯತೆ ತೊಡೆಯಬೇಕು" ಎಂದು ಹೇಳುತ್ತಿರುವ ಧಾರ್ಮಿಕ ಮುಖಂಡರು ಮತ್ತು ಸಂಘಟನೆಗಳವರೆಲ್ಲ ಇಂದಲ್ಲ ನಾಳೆಯಾದರೂ (ಅವರು ಪ್ರಾಮಾಣಿಕರಾಗಿದ್ದಲ್ಲಿ?) ಆಳವಾಗಿ ಪರಿಶೀಲಿಸಬೇಕಾದ ಸಲಹೆ ಇದಾಗಿದೆ.

—ಸುಧೀರ್, ಆನಂದೂರು

32. 'ಪ್ರವಾಹದ ದಿಕ್ಕು ಬದಲಿಸಹೊರಡುವುದು ಮೂರ್ಖತನ'

ಮಾನ್ಯರೆ,

ನಿಮ್ಮ ಸಿರಿಮನೆ ಕುಟುಂಬಕ್ಕೆ ಸಂಬಂಧಪಟ್ಟ ಪ್ರಕರಣವನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಓದುಗರ ಪ್ರತಿಕ್ರಿಯೆಯನ್ನು ಅಪೇಕ್ಷಿಸಿ ಒಂದು ಸಮಾಜವನ್ನು ಹಗುರವಾಗಿ ಚರ್ಚಿಸುವುದರ ಮೂಲಕ ಸುಧಾರಣೆಗೆ ಹೊರಟಂತೆ ಕಾಣುತ್ತೆ. ಸುಧಾರಣೆಯನ್ನು ಮೌನವಾಗಿ ಅಬ್ಬರವಿಲ್ಲದೆ, ಚರ್ಚೆಗೆ ಅವಕಾಶವಿಲ್ಲದಂತೆ ನಡೆಸುವುದೇ ಕ್ಷೇಮ.

ಈ ಹಿಂದೂ ಸಮಾಜವು ಗಂಗಾನದಿಯಂತೆ ಪವಿತ್ರವೂ, ವಿಶಾಲವಾದದ್ದೂ ಆಗಿದೆ. ನದಿಯ ದಡ ಕೊಚ್ಚದಂತೆ ಪ್ರಯತ್ನಿಸಬೇಕೇ ಶಿವಾಯ್ ಪ್ರವಾಹದ ದಿಕ್ಕನ್ನೇ ಬದಲಿಸಲು ಹೊರಡುವುದು ಮೂರ್ಖತನವಾದೀತು. ಎಲ್ಲಾ ಸಮಾಜದಲ್ಲೂ ಈಗಿನ ಆಧುನಿಕತೆಗೆ ಹೊಂದದ ಆಚರಣೆ ಇದ್ದೇ ಇದೆ. ಅದನ್ನು ಏಕ್‌ದಂ ನಿಲ್ಲಿಸಲು ಅಥವಾ ಬದಲಿಸಲು ಸುಲಭಸಾಧ್ಯವಲ್ಲ.

ನಮಗೆ ಸಿಕ್ಕಿರುವ ವಾಕ್‌ಸ್ವಾತಂತ್ರ್ಯ, ಲೇಖನ ಸ್ವಾತಂತ್ರ್ಯವನ್ನು ಪೂರ್ತಿ ಬಳಸುವುದು ಒಳ್ಳೆ ಬೆಳವಣಿಗೆಯಲ್ಲ. ಸಮಾಜದಲ್ಲಿ ನಡೆಯುವ ಅಥವಾ ನಡೆಸುವ ಘಟನೆಗಳಿಂದಲೇ ಆ ಸಮಾಜವು ಒಳ್ಳೆಯದು ಅಥವಾ ಕೆಟ್ಟದ್ದು ಎಂಬ ತೀರ್ಮಾನಕ್ಕೆ ಬರುವುದು ಸಾಧುವಲ್ಲ.

ಮಾನವರೆಲ್ಲಾ ಒಂದೇ ಜಾತಿ ಎಂದು ಹೇಳುವ ವಾಕ್ಯ ಹೇಳಲು, ಕೇಳಲು ಸೊಗಸಾಗಿದೆ. ಆದರೆ ಅದು ಕೇವಲ ವೇದಿಕೆಯ ಭಾಷಣಗಳಿಗೆ, ಬರಹಗಳಿಗೆ ಮಾತ್ರ. ಯಾರಲ್ಲೂ ಆಚರಣೆಯಲ್ಲಿ ಇಲ್ಲ.

ನೀವು ಅಂತರ್ಜಾತಿ ವಿವಾಹವನ್ನು ಮಾಡುವುದಕ್ಕೆ ಎಷ್ಟೋ ವರ್ಷಗಳ ಮೊದಲೇ ಇದನ್ನು ಮಾಡಿದವರಿದ್ದಾರೆ. ಆದರೆ ಅದು ಯಾರಿಗೂ ಮೇಲ್ಪಂಕ್ತಿಯಾಗಲೂ ಇಲ್ಲ. ಅದನ್ನು ನಡೆಸಿದವರು ಆದರ್ಶ ವ್ಯಕ್ತಿಗಳಾಗಲೂ ಇಲ್ಲ. ಕೆಲವರು ಇದನ್ನು ಒಪ್ಪಿದ್ದಾರೆ, ಕೆಲವರು ಪ್ರತಿಭಟಿಸಿದ್ದಾರೆ. ಯಾವುದೂ ಫಲಕಾರಿಯಾಗಿಲ್ಲ.

ನಿಮ್ಮ ಕುಟುಂಬದಲ್ಲಿ ನಡೆದ ಘಟನೆಗಳು ನಿಮಗೂ, ನಿಮ್ಮ ಬಂಧುಗಳಿಗೂ ಸೀಮಿತವಾದಂಥವು ಅದನ್ನು ನೀವೇ ಬಗೆಹರಿಸಿಕೊಳ್ಳಿರಿ. ಇದಕ್ಕೆ ಇಡೀ ಸಮಾಜದ ಒಪ್ಪಿಗೆ ಅಥವಾ ಆಕ್ಷೇಪಣೆ ಎರಡೂ ಇರಲಾರದು. ನಿಮಗೆ ಇಷ್ಟವಿದ್ದರೆ ಈ ಬಗ್ಗೆ ಒಂದು ಪುಸ್ತಕ ಅಥವಾ ಪತ್ರಿಕೆಯನ್ನು ಪ್ರಾರಂಭಿಸಿ ಆಂದೋಳನ ನಡೆಸಿ. ಸಮಾಚಾರ ಪತ್ರಿಕೆಯ ಮೂಲಕ ಈ ಪ್ರಚಾರದ ಅಗತ್ಯ ಇದೆ ಎಂದು ನನಗನ್ನಿಸುವುದಿಲ್ಲ.

'ಮನೆ ಗೆದ್ದು ಮಾರು ಗೆಲ್ಲಬೇಕು' ಎಂಬ ಗಾದೆ ಇದೆ. ಸಮಾಜದಲ್ಲಿ ಸುಧಾರಣೆಗಳು ಆಗುತ್ತಲೇ ಇವೆ. ನಿಧಾನವಾಗಿ ಆಚರಣೆಗೆ ಬರುತ್ತಿದೆ. ಇದಕ್ಕೆ ಗಡಿಬಿಡಿ ಯಾಕೆ? ಸಿಹಿ ಕಹಿ, ಎರಡನ್ನೂ ನಾವು ಸ್ವೀಕರಿಸೋಣ.

ಈ ಲೇಖನ ಯಾರಿಗೂ ಉತ್ತರವಲ್ಲ. ಇದಕ್ಕೆ ಪ್ರತಿ ಉತ್ತರದ ಅಪೇಕ್ಷೆಯೂ ಇಲ್ಲ. ಈ ಚರ್ಚೆಯನ್ನು ಮುಂದುವರಿಸುವುದೂ ಇಲ್ಲ.

—ಟಿ.ವಿ. ನರಸಿಂಹ ಹೇರಳೆ,
ತುಳುವಿನಕೊಪ್ಪ.

33. ಆದರ್ಶ ಕೆಲಸ ನಮ್ಮಿಂದಾಗದಿದ್ದರೆ ಇತರರ ಆದರ್ಶ ನಡೆಗೆ ಅಡ್ಡಿಯಾದರೂ ಬರಬಾರದು

ಸಂಪಾದಕರೆ,

ಕುಗ್ರಾಮವೊಂದರಲ್ಲಿ 'ಮೇಲು ಜಾತಿ'ಯವರೊಬ್ಬರ ಮಗಳು 'ಕೆಳ ಜಾತಿ'ಯ ಹುಡುಗನೊಬ್ಬನನ್ನು ಮೆಚ್ಚಿ ಮದುವೆಯಾದುದಕ್ಕೆ ಇಡೀ ತಾಲ್ಲೂಕಿನ 'ಮೇಲ್ಜಾತಿ'ಯವರು ತಮ್ಮ ಜಾತಿಯ ಮೌಲ್ಯಗಳು, ಮಾನ-ಮರ್ಯಾದೆಗಳು ಬೀದಿಯಲ್ಲಿ ಹರಾಜಾದವು ಎಂಬಂತೆ ಬೊಬ್ಬೆಯಿಡುತ್ತಿದ್ದಾರೆ. ಇದೆಂಥ ವಿಪರ್ಯಾಸ! ಒಬ್ಬ ಹೆಣ್ಣು ತನ್ನ ಸುತ್ತ-ಮುತ್ತ ಇರುವ ಅಸಂಗತ ಸಂಪ್ರದಾಯ, ಮೂಢ ನಂಬಿಕೆ, ಕಂದಾಚಾರ, ಜಾತಿ-ಮತಗಳ ಕಟ್ಟುಪಾಡುಗಳಿಂದ ಹೊರಬಂದು, ತನಗೆ ಮಾನಸಿಕವಾಗಿ ಒಪ್ಪಿಗೆಯಾಗುವ ಹುಡುಗನನ್ನು ಆರಿಸಿಕೊಂಡು ಮದುವೆಯಾಗುವ ಹಕ್ಕು ಇಲ್ಲವೆ?

ಸುತ್ತಮುತ್ತಲಿನ ಸಮಾಜದ ಸಂಪ್ರದಾಯಗಳ ಭಯವಿದ್ದೂ ತಮ್ಮ ಪ್ರೀತಿಯ ಮಗಳ ಬಾಳಿನ ಸಂತೋಷಕ್ಕಾಗಿ ಈ ಮದುವೆಗೆ ಒಪ್ಪಿಗೆ ಕೊಟ್ಟ ಈಕೆಯ ತಂದೆ-ತಾಯಿಗಳನ್ನು ಹಾಗೂ ಈ ಪ್ರಜ್ಞಾವಂತ ಹುಡುಗಿಯ ಧೈರ್ಯವನ್ನು, ಅದೇ ರೀತಿ ಸಂತೋಷದಿಂದ ತಮ್ಮ ಮನೆ ತುಂಬಿಸಿಕೊಂಡ ಆ **ಹುಡುಗ ಮತ್ತು ಆತನ ಬಂಧುಗಳನ್ನು ಮೆಚ್ಚಿ ಪ್ರೋತ್ಸಾಹಿಸಬೇಕಾಗಿದೆ.**

ಆದರೆ, ನಮ್ಮಿಂದ ಇಂತಹ ಆದರ್ಶ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದಾದರೆ, ಬೇರೆಯವರು ಮಾಡಿದ್ದಕ್ಕೆ ಏಕೆ ವಿರೋಧಿಸಬೇಕು? ಕೇವಲ ಜಾತಿ, ಧರ್ಮ-ಮತಗಳಿಂದ, ನಮ್ಮ ವ್ಯಕ್ತಿತ್ವವನ್ನೂ ಜೀವನದ ಮಟ್ಟವನ್ನೂ ಗುರುತಿಸಬೇಕೆ, ಇಲ್ಲ ನಾವು ಬದುಕಿನಲ್ಲಿ ಅಳವಡಿಸಿಕೊಂಡಿರುವ ಮೌಲ್ಯಗಳ, ಆದರ್ಶಗಳ ಹಿನ್ನಲೆಯಲ್ಲಿ ಗುರುತಿಸಬೇಕೆ-ಎಂಬ ಬಗ್ಗೆ ನಾವು ಯೋಚಿಸಬೇಕಾಗಿದೆ.

ನಮ್ಮ ಜಾತಿಗಳು ನಮ್ಮ ಬದುಕಿನ ಆಧಾರಗಳಲ್ಲ. ಒಂದು ಜಾತಿ ಮತ್ತೊಂದು ಜಾತಿಗೆ ಸಹಾಯ, ಸಹಕಾರ ಮಾಡಬೇಕಾಗುತ್ತದೆ, ಹಾಗೆ ಮಾಡುತ್ತಲೂ ಇವೆ. ಬ್ರಾಹ್ಮಣರ ಮನೆಯಲ್ಲಿರುವ ಹಸುವಿನ ಹಾಲನ್ನು ಕರೆಯಬೇಕಾದರೆ ಶೂದ್ರ ಜಾತಿಯ ಆಳು ಬೇಕಾಗಬಹುದು........... ಶೂದ್ರ ಹಾಲು ಕರೆದು ತಂದಿದ್ದಾನೆ ಎಂದು ಎಸೆವರೆ? ಹಾಗೆಯೇ ಒಕ್ಕಲಿಗ, ಲಿಂಗಾಯಿತ, ಹೊಲೆಯ, ಮಾದಿಗ ಮುಂತಾದ ಪ್ರತಿಯೊಬ್ಬರೂ ವೃತ್ತಿಯಲ್ಲಿ ಬೇರೆಯೇ ಹೊರತು, ಮನುಷ್ಯತ್ವದಲ್ಲಿ, ವ್ಯಕ್ತಿತ್ವದಲ್ಲಿ, ನಾವು ಬೆಳೆಸಿಕೊಂಡ ಹಾಗೆ, ಬೆರೆತ ಹಾಗೆ ಇರುತ್ತಾರೆ.

ಆದ್ದರಿಂದ ಜಾತಿ, ಧರ್ಮಗಳ ಕೋಟೆಗಳಿಂದ ಹೊರಬಂದು, ಆದರ್ಶ ಸಮಾಜದ ಪುನರ್ ಸ್ಥಾಪನೆಯತ್ತ ಮಠಾಧೀಶರು, ಧಾರ್ಮಿಕ ನಾಯಕರು, ಸಾಮಾಜಿಕ ಮುಖಂಡರು ಪ್ರಯತ್ನಿಸಬೇಕು. ಅದಿಲ್ಲವಾದಲ್ಲಿ ಇಂತಹ ಪ್ರಯತ್ನ ಮಾಡುವವರಿಗೆ ವಿರೋಧ ವ್ಯಕ್ತಪಡಿಸದೆ ಸುಮ್ಮನಾದರೂ ಇರಬೇಕು.

—'ಚಿಂತಕ',
ಬೆಂಗಳೂರು.

34. "ಶಿಷ್ಯ ಮಂಡಳಿ ಅನವಶ್ಯಕ ದುಡುಕದಿರಲಿ"

ಮಾನ್ಯರೆ,

1. ಸ್ವಾಮೀಜಿಯವರು ಈ ಸಂದರ್ಭದಲ್ಲಿ ಸಂದರ್ಶನವನ್ನೇ ಕೊಡದಿರಬಹುದಿತ್ತು. "ನಾವು ನಮ್ಮ ಚೌಕಟ್ಟಿನಲ್ಲಿ ಯಾರಿಗೆ ಏನು ಹೇಳಬೇಕೋ ಅದನ್ನು ಹೇಳಿದ್ದೇವೆ. ನಿಮಗೆ ಉತ್ತರ ಕೊಡಲು ಬಾಧ್ಯರಲ್ಲ" ಎಂದು ಹೇಳಬಹುದಿತ್ತು ಅಥವಾ, "ನಿಮ್ಮ ಪ್ರಶ್ನೆಗಳನ್ನು ಬರೆದುಕೊಡಿ. ನಾವು ಅವುಗಳನ್ನು ಸ್ಟಡಿ ಮಾಡಿ ಉತ್ತರ ಕೊಡುತ್ತೇವೆ" ಎಂದು ಹೇಳಿ ಸಮಯಾವಕಾಶ ಪಡೆದು ವಿವಾದ, ವಿರೋಧಾಭಾಸಗಳಿಗೆ ಅವಕಾಶವಿಲ್ಲದಂತೆ ಉತ್ತರಿಸಬಹುದಾದ ಸಾಧ್ಯತೆಯೂ ಇತ್ತು ಎಂಬುದು ನನ್ನ ಅನ್ನಿಸಿಕೆ.

2. ಈ ವಿವಾದದಿಂದ ನಮ್ಮ ಸ್ವಾಮೀಜಿಯವರಿಗೆ ಏನೋ ಅವಮಾನವಾದಂತೆ ಗುಲ್ಲು ಹರಡಿರುವಂತಿದೆ. ಆದರೆ ಸ್ಥಿತಪ್ರಜ್ಞರಾದ ಸ್ವಾಮಿಗಳಿಗೆ ಮಾನ-ಅವಮಾನ, ಸುಖ-ದುಃಖಗಳೆಲ್ಲ ಸಮಾನವಷ್ಟೆ. ಇದನ್ನರಿಯದೆ ಅನವಶ್ಯಕವಾಗಿ ಶಿಷ್ಯ ಮಂಡಲಿಯವರು ದುಡುಕಿ ವಿವಾದ ಮಾಡುವುದನ್ನು ನಿಲ್ಲಿಸುವುದೇ ಸೂಕ್ತ.

ಕೆ. ವಿ. ಶಿವಸ್ವಾಮಿ,
ಕತ್ತಲಗಿರಿ.

ವೇದಿಕೆ

35. "ಸುಧಾರಣಾಪರರೆಲ್ಲ ಖಂಡಿಸಬೇಕಾದ ಸಮಾಜ ದ್ರೋಹ"

ಪ್ರಿಯ ಸಂಪಾದಕರೆ,

ನಿಮ್ಮ ತಂಗಿಯ ಅಂತರ್ಜಾತಿ ವಿವಾಹದ ನಂತರದ ಬೆಳವಣಿಗೆಯ ಬಗ್ಗೆ ಓದಿದೆ. ಜಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯನ್ನು ಮಾನವೀಯ ದೃಷ್ಟಿಯ ಅನುಕೂಲತೆಗನುಸಾರವಾಗಿ ಬದಲಿಸಿ ಜೀವನ ಮಾರ್ಗವನ್ನು ಸುಲಲಿತಗೊಳಿಸಿಕೊಳ್ಳುವ ಬಗ್ಗೆ ಆರಂಭವಾದ ವಿಚಾರವಂತರ ಹೋರಾಟ ಇಂದು ನಿನ್ನೆಯದಲ್ಲ. **ಶತ ಶತಮಾನಗಳ ಈ ಹೋರಾಟ ಹಲವು ಪಿಡುಗುಗಳನ್ನು ಹತ್ತಿಕ್ಕುವಲ್ಲಿ ಸಫಲವಾಗಿದ್ದರೂ**, ಜಾತಿ ಪದ್ಧತಿ, ಅಸ್ಪೃಶ್ಯತೆಗಳಂತಹ ಭೀಕರ ಪಿಡುಗುಗಳನ್ನು ಇನ್ನೂ ಹತ್ತಿಕ್ಕಲು ಸಾಧ್ಯವಾಗಿಲ್ಲ. ಬಸವಣ್ಣ, ಗಾಂಧೀಜಿಯಂತಹ ಹಲವು ತಜ್ಞ ಸಮಾಜ ಚಿಕಿತ್ಸಕರು ದುಡಿದು ಹೋಗಿದ್ದರೂ ಅರೆ ಬರೆ ಸಾಧನೆಯಲ್ಲಿಯೇ ಇದ್ದೇವೆ. ಕಾರಣ:

1. ಮೌಢ್ಯವನ್ನೇ ಗ್ರಾಸವನ್ನಾಗಿಸಿಕೊಂಡಿರುವ ಎಲ್ಲಾ ಧರ್ಮಗಳು ವೈಜ್ಞಾನಿಕ ದೃಷ್ಟಿಯ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದಿರಲಿ, ಸಹಿಸಿಕೊಳ್ಳದಿರುವುದು.

2. ದೇಶದ ತುಂಬಾ ಇರುವ ವಿದ್ಯೆ ಇಲ್ಲದ ಶೇಕಡ 80ರಷ್ಟರ ಜನತೆ; ತಾವು ನಂಬಿದ ಕಂದಾಚಾರದ ನೀತಿ ಸರ್ವಮಾನ್ಯ ನೀತಿಯೆಂದು ಕುರಿಯಂತೆ ಅನುಸರಿಸುವ ಇವರ ಸ್ವಭಾವ.

3. ವೈಚಾರಿಕತೆಯನ್ನು ಹೆಚ್ಚಾಗಿ ಬೆಳೆಸದೆ ಇರುವ ಇಂದಿನ ವಿದ್ಯಾ ನೀತಿ.

ಅಸ್ಪೃಶ್ಯತೆಯನ್ನು ಮತ್ತು ಜಾತೀಯತೆಯನ್ನು ನಿಜವಾದ ಅರ್ಥದಲ್ಲಿ ತೊಡೆದು ಹಾಕಲು ಇರುವ ಏಕೈಕ ಮಾರ್ಗವೆಂದರೆ ಅಂತರ್ಜಾತಿ ವಿವಾಹ. ಹಿಂದೂ ಸಮಾಜದ ಮೇಲ್ಜಾತಿ ಎಂದು ಕರೆಸಿಕೊಂಡಿರುವ ಬ್ರಾಹ್ಮಣ ಹುಡುಗಿ, ಅದೇ ಸಮಾಜದ ಕೀಳ್ಜಾತಿ ಎನಿಸಿಕೊಂಡಿರುವ ಹರಿಜನ ಹುಡುಗ— ಇಬ್ಬರೂ ಪರಸ್ಪರ ಒಪ್ಪಿ, ತಮ್ಮ ಹಲವು ಹಿರಿಯರ ಒಪ್ಪಿಗೆಯೊಂದಿಗೆ ಮದುವೆಯಾದದ್ದನ್ನು ಆ ಸಮಾಜದವರು ಪ್ರತಿಭಟಿಸಿ, ಹುಡುಗಿಯ ತಂದೆ ತಾಯಿಗೆ, ಸಂಬಂಧಿಕರಿಗೆ ಹಾಕಿರುವ ಬಹಿಷ್ಕಾರ ಹಾಗೂ ನೀಡಿದ ಪ್ರಾಯಶ್ಚಿತ್ತದ ಕ್ರಮಗಳು **ಇಡೀ ಸಮಾಜಕ್ಕೆ ಕಳಂಕ ತರುವಂತಹ ಹೇಯ ಕ್ರಿಯೆ.** ಅದರಲ್ಲೂ ಈ ಕಾರ್ಯಕ್ಕೆ ಸದರಿ ಸಮಾಜದ ಗುರು ಪೀಠದ ಸ್ವಾಮೀಜಿಯ ಪ್ರತ್ಯಕ್ಷವೋ ಪರೋಕ್ಷವೋ ಮಾರ್ಗದರ್ಶನ ಅಥವಾ ಕಡೇ ಪಕ್ಷ ಮೌನ ಸಮ್ಮತಿ ಇರುವುದು ಗುರುಪೀಠಕ್ಕಾಗಲಿ, ಜೊತೆಗೆ ಇಂದಿನ ಸಮಾಜಕ್ಕಾಗಲಿ ಶೋಭೆ ತರುವಂತಹುದಲ್ಲ.

ಎಚ್ಚೆತ್ತ ಎಲ್ಲಾ ವರ್ಗದ ಜನತೆ, ಸಮಾಜ ಸುಧಾರಣೆಯ ಬಗ್ಗೆ ಕಳಕಳಿ ಇರುವ ಎಲ್ಲಾ ಸಂಘ ಸಂಸ್ಥೆಗಳು ಗುರುಪೀಠದ ಉಸ್ತುವಾರಿಕೆಯ ಈ ಸಮಾಜ ದ್ರೋಹಿ ಕ್ರಿಯೆಯನ್ನು ಒಂದಾಗಿ ಖಂಡಿಸಬೇಕು; ಜೊತೆಗೆ ಸರ್ಕಾರ ಈ ವಿಷಯದಲ್ಲಿ ಮಧ್ಯೆ ಪ್ರವೇಶಿಸಿ, ಅಸ್ಪೃಶ್ಯತೆಯ ಬಗ್ಗೆ ಈ ಗುರುಪೀಠ ನೀಡಿದ ಪ್ರಚೋದನೆಯನ್ನು ಹಾಗೂ ಈ ಮುಖಂಡರು ನೆರವೇರಿಸಿರುವ ಬಹಿಷ್ಕಾರವನ್ನು ಈಗಿರುವ ಸಾಕ್ಷ್ಯಾಧಾರಗಳಿಂದಲೇ ಗಣನೆಗೆ ತೆಗೆದುಕೊಂಡು, ಈ ಸಂಸ್ಥೆಯ ಮೇಲೆ ಹಾಗೂ ಬಹಿಷ್ಕಾರದಲ್ಲಿ ಪಾಲ್ಗೊಂಡ ಜಾತೀಯ ಮುಖಂಡರ ಮೇಲೆ ಕೂಡಲೆ ಕಾನೂನಿನ ಕ್ರಮ ಕೈಗೊಳ್ಳುವಂತೆ ಒತ್ತಾಯ ತರಬೇಕು.

ಹೀಗಾದಲ್ಲಿ ಮಾತ್ರ ಮುಂದೆ ಈ ಅಸ್ಪೃಶ್ಯತೆಯ ಆಚರಣೆಯನ್ನು ಇತರರು ಮಾಡದಿರಲು ಭಯ ಮೂಡಿಸಿದಂತಾಗುತ್ತದೆ. ಜೊತೆಗೆ ಜಾತಿಯ ಪಿಡುಗನ್ನು ತೊಡೆದು ಹಾಕಲು ನೆರವಾಗುವ ಅಂತರಜಾತಿ ವಿವಾಹಗಳಿಗೂ ಸಹಾಯಕವಾಗುತ್ತದೆ.

—ಎಂ. ನಾರಾಯಣ,
ಕೊಪ್ಪ.

36. ಕಟುವಾಗಿ ಟೀಕಿಸುವುದಕ್ಕಿಂತ ತೆರೆದ ಮನಸ್ಸಿನಿಂದ ಚರ್ಚಿಸಬೇಕು

ಮಾನ್ಯರೆ,

7.6.87 ರ ಮುಂಜಾವು ಪತ್ರಿಕೆಯಲ್ಲಿನ ವಿಷಯವು ನಿಜವಾಗಿಯೂ ಪ್ರತಿಯೊಬ್ಬರೂ ಯೋಚಿಸುವಂತಹದು. 20 ನೇ ಶತಮಾನದ ಅಂಚಿನಲ್ಲಿರುವ ಜಾತ್ಯತೀತ ಭಾರತವು ಎದುರಿಸುತ್ತಿರುವ ಧಾರ್ಮಿಕ ವಿಷಯಗಳಲ್ಲಿ ಇದೂ ಒಂದು. ಅಂತರ್ಜಾತಿ ವಿವಾಹದಲ್ಲಿ ಮುಖ್ಯವಾಗಿ ಹುಡುಗ–ಹುಡುಗಿ ಪರಸ್ಪರ ಮಾನಸಿಕವಾಗಿ ಸಂಪೂರ್ಣ ಒಪ್ಪಿದ್ದರೆ, ಅವರ ಸಂಬಂಧಿಗಳು ಮತ್ತು ಸಾರ್ವಜನಿಕರು ಅದನ್ನು ಪುರಸ್ಕರಿಸುವುದು ಸಮಯೋಚಿತವಾದುದು. ಇದರಲ್ಲಿ ಜಾತೀಯತೆಯ ಪ್ರಶ್ನೆಗಿಂತಲೂ, ಮುಂದಿನ ಅವರ ಭವಿಷ್ಯದ ಬಗೆಗಿನ ಮಾನವೀಯತೆಯ ಅಂಶ ಮುಖ್ಯವಾದುದು.

ಆದರೆ ಇಂತಹ ಧಾರ್ಮಿಕ ವಿಷಯಗಳಲ್ಲಿ ಒಂದು ವರ್ಗದ ಜನರು ಅದನ್ನು ವಿರೋಧಿಸಿ, ಇಂತಹ ಶುದ್ಧಿ ಮುಂತಾದ ಕಾರ್ಯಗಳನ್ನು ಕೈಗೊಳ್ಳುತ್ತಿರಬೇಕಾದರೆ, ಅವರ ಈ ಕಾರ್ಯವನ್ನು ಸಮಯೋಚಿತವಾಗಿ ಎದುರಿಸುವ ಜೊತೆಗೆ ಅದರ ಹಿನ್ನಲೆಯನ್ನು ಪರಿಶೀಲಿಸುವುದು ಅಗತ್ಯ. ಅಂಥವರ ಬಗ್ಗೆ ಪತ್ರಿಕೆಯಲ್ಲಿ ಕಟುವಾಗಿ ಟೀಕಿಸಿ ಬರೆದರೆ ಕೇವಲ ಪತ್ರಿಕೆಗೆ ಒಂದು ಪ್ರಚಾರ ಸಿಗುತ್ತದೆಯೇ ವಿನಃ ಸಮಸ್ಯೆಗಳು ಬಗೆಹರಿಯಲಾರವು. ಇಂತಹ ವಿಷಯದಲ್ಲಿ ಮಠಾಧೀಶರೂ ಸಮಯೋಚಿತವಾಗಿ ವರ್ತಿಸಿಲ್ಲ ನಿಜ. ಅದಕ್ಕಾಗಿ ಆ ಒಂದು ಸಮುದಾಯವನ್ನೇ ಟೀಕಿಸುವುದು ಸರಿಯಲ್ಲ. ಒಂದು ವೇಳೆ ಅದೇ ಕೆಲಸವನ್ನು ಯಾವನೋ ಒಬ್ಬ ರಾಜಕೀಯ ಪುಡಾರಿ ಮಾಡಿದ್ದರೆ, ಬಹುಶಃ ಇಷ್ಟೊಂದು ಪ್ರತಿಕ್ರಿಯೆಗಳು ಬರುತ್ತಿರಲಿಲ್ಲವೇನೋ?

ಇಂತಹ ಸುಧಾರಣೆಯ ಕಾರ್ಯಕ್ರಮಗಳಲ್ಲಿ ತೊಡಗುವವರು ಒಂದು ವರ್ಗದ ಪರವಾಗಿ ನಿಂತು, ಇನ್ನೊಂದು ಸಮುದಾಯದ ಮನೆಗೆ ಹೋಗಿ ಜಾತೀಯತೆಯನ್ನು ತೊಡೆಯಬೇಕು ಅಂದರೆ ಯಾರೂ ಓಗೊಡಲಾರರು. ಮೊದಲು ಅವರ ಮನದಲ್ಲಿರುವ "ಇವನು ನಮ್ಮವನಲ್ಲ" ಎಂಬ ಭಾವನೆಯನ್ನು ತೊಡೆಯುವುದು ಅವಶ್ಯಕ.

ಹಾಲಿ ಈ ವಿವಾಹದ ವಿಚಾರವನ್ನೇ ತೆಗೆದುಕೊಳ್ಳೋಣ. ಅಲ್ಲಿನ ಊರಿನವರ ವರ್ತನೆಗೆ ಕಾರಣಗಳನ್ನು ಮೊದಲು ಹುಡುಕಲು ಪ್ರಯತ್ನಿಸಬೇಕು. ಬ್ರಾಹ್ಮಣರಲ್ಲಿ ಎಲ್ಲರೂ ಅಂತರ್ಜಾತಿಯ ವಿವಾಹದ ವಿರೋಧಿಗಳಲ್ಲ [ಹಾಗೆಯೇ ಇತರರಲ್ಲಿಯೂ ಎಲ್ಲರೂ ಅಂತರ್ಜಾತಿ ವಿವಾಹವನ್ನು ಸಮ್ಮತಿಸುವುದಿಲ್ಲ. ಅವರಲ್ಲಿಯೂ ಜಾತೀಯ ವ್ಯಾಮೋಹ ಸಾಕಷ್ಟಿದೆ]. ಆದರೆ ಅವರು ತಮ್ಮ ಸಹನುತವನ್ನು ಪ್ರಕಟಪಡಿಸುವಂತಹ

(6ನೇ ಪುಟಕ್ಕೆ)

ಹೆಣ್ಣಿನ ತಂದೆಯ 'ಸ್ಪಷ್ಟನೆ'

ಓದುಗರ ಸಮಕ್ಷಮಕ್ಕೆ,

ದಿನಾಂಕ 7–6–87 ರ 'ಮುಂಜಾವು' ಪತ್ರಿಕೆಯಲ್ಲಿ ನಮ್ಮ ಸಂಸಾರದ ಬಗ್ಗೆ ಬಂದಿರುವುದು ಸರಿಯಷ್ಟೆ. ಆ ಬಗ್ಗೆ ನನ್ನ ಅಭಿಪ್ರಾಯಗಳನ್ನು ಹೇಳಲಿಚ್ಛಿಸುತ್ತೇನೆ.

ನಾಗರಾಜ ನನ್ನ ಮಗನಾದರೂ ಅವನಿಗೂ ನನಗೂ ಅಭಿಪ್ರಾಯ ಭೇದವಿದೆ. ಮೊದಲಿನಿಂದಲೂ ಇತ್ತು. ಅವನು ಮಾಡುವ ಯಾವುದೇ ಕೆಲಸವೂ ನನಗೆ ಸರಿಕಾಣುತ್ತಿರಲಿಲ್ಲ. ಅವನು ಹೇಳುವಂತೆ ಅವನ ಅಭಿಪ್ರಾಯವನ್ನು ಬೆಂಬಲಿಸುವ ಅವನ ತಮ್ಮಂದಿರು ನನ್ನ ಜೊತೆಯಲ್ಲಿದ್ದುದು ಹಾಗೂ ಬಹಳಷ್ಟು ಸಂಸಾರದ ಜವಾಬ್ದಾರಿಯನ್ನು ಹೊತ್ತಿದ್ದು ನನ್ನನ್ನು ಒತ್ತಡಕ್ಕೆ ಸಿಕ್ಕಿಸಿ ಮದುವೆ ಮಾಡಿಸಿದ್ದಾರೆ. ಇದಕ್ಕೆ ನನ್ನ ಸಹಕಾರವಾಗಲಿ, ಅನುಮತಿಯಾಗಲಿ ಇರಲಿಲ್ಲ.

ಪತ್ರಿಕೆಯಲ್ಲಿ ಹೇಳಿರುವಂತೆ ಅನೇಕ ಘಟನಾವಳಿಗಳು ನಡೆದು, ನಮ್ಮ ಮನೆಗೆ ಯಾರೂ ಬರದೇ ಹೋಗಿದ್ದರಿಂದ ನನ್ನ ಪತ್ನಿಯ ಹಾಗೂ ಸೊಸೆಯಂದಿರ ಮನಃಶಾಂತಿಗಾಗಿ ಏನಾದರೂ ಮಾಡಬೇಕೆಂದು ಹಿರಿಯ ಮಕ್ಕಳಿಬ್ಬರಲ್ಲಿ (ಬೇರೆ ಬೇರೆ ಇದ್ದಾರೆ) ಹೇಳಿದೆ. ಅದಕ್ಕಾಗಿ ನಮ್ಮ ಸ್ನೇಹಿತರೊಬ್ಬರ ಜೊತೆ (ಪತ್ರಿಕೆಯಲ್ಲಿ ಬ್ರಾಹ್ಮಣ ಮುಖಂಡ ಎಂದು ಹೇಳಿದೆ) ಹರಿಹರಪುರ ಸ್ವಾಮಿಗಳನ್ನು ಭೇಟಿಯಾಗಿ ವಿಷಯ ತಿಳಿಸಿದರು.

ಸ್ವಾಮೀಜಿಯವರು "ನಿಮಗೆ ಬಹಿಷ್ಕಾರ ಹಾಕಿದವರು ಯಾರು? ನಾವೇ ಹಾಕಬೇಕು. ಆ ರೀತಿಯ ಯಾವುದೇ ಅಭಿಪ್ರಾಯವನ್ನು ನಾವು ಹೊಂದಿಲ್ಲ" ಎಂದಾಗ ಹೋದವರು "ನಮಗೆ ಆಗದೇ ಇದ್ದವರು ಉದ್ದೇಶಪಟ್ಟು ಸಾಕಷ್ಟು ಅಪಪ್ರಚಾರ ಮಾಡಿ ಕಹಿ ವಾತಾವರಣವನ್ನು ಉಂಟುಮಾಡಿರುವುದರಿಂದ, ಏನಾದರೊಂದು ಕಾರ್ಯಕ್ರಮವಿಲ್ಲದೆ ಹೋದರೆ ನೆಂಟರಿಷ್ಟರಿಗೆ ನಂಬಿಕೆ ಬರದೇ ಇರುವುದರಿಂದ ಏನಾದರೂ ಪ್ರಾಯಶ್ಚಿತ್ತವಿದ್ದರೆ ತಿಳಿಸಿ" ಎಂದಾಗ "ಹಾಗಾದರೆ ಯಾರಾದರೂ ಭಟ್ಟರಿಗೆ ಹೇಳಿ ಪುಣ್ಯಾಯ ಮಾಡಿಸಿಕೊಳ್ಳಿ ಅಷ್ಟೇ ಸಾಕು" ಎಂದು ಹೇಳಿದರು.

ಅದರಂತೆ ಪುಣ್ಯಾಯ ಮಾಡಿಸಿಕೊಂಡಿದ್ದೇ ವಿನಃ ಬಲಾತ್ಕಾರವಾಗಿ ನನಗೆ ಯಾರೂ ಪಂಚಗವ್ಯ ಕುಡಿಸಲಿಲ್ಲ. ನಮ್ಮ ನೆಮ್ಮದಿಗೋಸ್ಕರ ಆ ರೀತಿ ಮಾಡಿಕೊಂಡಿದ್ದೇ ಹೊರತು, ಪತ್ರಿಕೆಯಲ್ಲಿ ಬರೆದಂತೆ ಯಾರದೂ ಒತ್ತಾಯದಿಂದಲ್ಲ. ಆದ್ದರಿಂದ ಯಾರೂ ಬೇಸರಿಸದೆ ಮೊದಲಿನಂತೆ ಬಂದು ಹೋಗಿ, ಸಹಾಯ–ಸಹಕಾರವನ್ನು ಕೊಡುವುದರ ಮೂಲಕ ನಮಗೆ ನೆಮ್ಮದಿಯಿಂದ ಇರಲು ಸಹಾಯ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಅಲ್ಲದೆ ಈ ಸಂಬಂಧವಾಗಿ ಊಹಾಪೋಹಗಳಿಂದ ವೈದಿಕ ಮಂಡಲಿಯವರಿಗಾಗಲಿ, ಬಂಧು ಬಾಂಧವರಿಗಾಗಲಿ, ಮನಸ್ಸು ನೊಂದಿದ್ದರೆ ದಯವಿಟ್ಟು ಕ್ಷಮೆ ನೀಡಬೇಕಾಗಿ ಕೇಳಿಕೊಳ್ಳುವೆನು.

ನನ್ನ ಪತ್ನಿಯು ಒಳ್ಳೆಯ ಕುಟುಂಬದಿಂದ ಬಂದವಳಾಗಿದ್ದು, ಈ ಬಗ್ಗೆ ಅವಳಲ್ಲಿ ವಿಚಾರ ಮಾಡಿದಾಗ, ಮಾತೃ ಹೃದಯದ ಅನುರಾಗದಿಂದಲೂ ಒತ್ತಡದಿಂದಲೂ ಸ್ಪಂದಿಸಿದುದೇ ವಿನಃ ನನ್ನ ಸಮ್ಮತಿಯೆಂದು ಯಾರೂ ತಿಳಿಯುವ ಅವಕಾಶವಿಲ್ಲವೆಂಬ ಅರ್ಥ ಬರುವಂತೆ ತಿಳಿಸಿದುದಲ್ಲದೆ, ಪತಿಯ ಅಭಿಪ್ರಾಯದ ಬಗ್ಗೆ ಭಿನ್ನವಿಲ್ಲವೆಂದು ಸ್ಪಷ್ಟವಾಗಿ ತಿಳಿಸಿರುತ್ತಾಳೆ.

ಇನ್ನುಳಿದ ನನ್ನ ಮಕ್ಕಳಿಗಾದರೂ ದೇವರು ಒಳ್ಳೆಯ ಬುದ್ಧಿಯನ್ನು ಕೊಟ್ಟು, ನನ್ನ ಈ ಮುಪ್ಪಿನ ಕಾಲದಲ್ಲಿ ಮನಃಶಾಂತಿಯಿಂದಿರಲು ಅವಕಾಶ ಮಾಡಿಕೊಡುವರಾಗಿ ನಂಬಿರುತ್ತೇನೆ. ಅಲ್ಲದೆ ಯಾವ ಸಂದರ್ಭದಲ್ಲಿಯೂ ನಾನು ಸಮಾಜದಿಂದ ದೂರಾಗಿ ನಿಲ್ಲಲು ತಯಾರಿಲ್ಲವೆಂದು ಸ್ಪಷ್ಟವಾಗಿ ತಿಳಿಸಬಯಸುತ್ತೇನೆ.

ನನಗೆ ಅಹಿತವಾಗೇ ನಡೆಯುವ ಮಕ್ಕಳು ನನ್ನ ಮನೆಗೆ ಬರಬೇಕಾದ್ದಿಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸುತ್ತೇನೆ.

ಇಂತಿ,
ಶಿರಿಮನೆ ರಾಮಯ್ಯ

(ಯಥಾ ನಕಲನ್ನು 'ಶೃಂಕೊನ'ಕ್ಕೆ ಕಳಿಸಿದ್ದೇನೆ.)

37. ಹರಿಜನರಿಗೆ ಹಾಕುವ 'ಧರ್ಮೋದ್ಧಾರ'ದ ಬಹಿಷ್ಕಾರದಂಥದೇ

ಪ್ರಿಯ ಓದುಗರೆ,

ಹರಿಜನರು ಹೋಟೇಲು, ಬಾವಿ, ಸ್ಮಶಾನ ಇತ್ಯಾದಿ ಬಳಸುವುದು, ಅಥವಾ ದರ್ಖಾಸ್ತ್ ಭೂಮಿ, ಹೆಚ್ಚು ಕೂಲಿ ವಗೈರೆ ಕೇಳುವುದು, ಇಲ್ಲವೆ 'ಬಿಟ್ಟಿ' ಸೇವೆ, ತಲೆ ಮೇಲೆ ಮಲ ಹೊರುವಿಕೆ, ಸತ್ತ ದನ ಹೊರುವಿಕೆ ಮುಂತಾದುವನ್ನು ನಿರಾಕರಿಸುವುದು ಇತ್ಯಾದಿ 'ಶಾಸ್ತ್ರ ನಿಷಿದ್ಧ' ಅಥವಾ 'ಸಂಪ್ರದಾಯ ಬಾಹಿರ' ನಡತೆಗಾಗಿ ಅವರಿಗೆ 'ಶಿಕ್ಷೆ' ಕೊಡಲು ಅವರನ್ನು ಇಡೀ ಊರಿಗೆ ಊರೇ ಬಹಿಷ್ಕರಿಸಿ, ನಿರುದ್ಯೋಗ, ಹಸಿವು, ಬಾಯಾರಿಕೆಗಳಿಂದ ಅವರು ಆ ಊರಿನಲ್ಲಿ ಬಾಳಲಾರದಂತೆ ಮಾಡಿ, ಅವರ ಮನೆಗಳಿಗೆ ಬೆಂಕಿ ಕೊಡುವ, ಹೆಂಗಸರು–ಮಕ್ಕಳೆಂಬ ಸಾಮಾನ್ಯ ಅನುಕಂಪವನ್ನೂ ತೋರಿಸದೆ ಇರುವ, 'ಧರ್ಮೋದ್ಧಾರ'ದ ಬಹಿಷ್ಕಾರ ಅಥವಾ ಪ್ರಾಯಶ್ಚಿತ್ತದ ಬಗ್ಗೆ ಕೇಳಿದ್ದೇವೆ. ಅದು ಈಗಿನ ಪ್ರಚಲಿತ ಸಂಗತಿಯೇ ಎಂಬಂತಾಗ್ಗಿದೆ. ಹಾಲಿ ಸಿರಿಮನೆಯಲ್ಲಿ ನಡೆದದ್ದೂ ಅಂಥದೇ ಮತ್ತೊಂದು; ಅಂಥದೇ 'ಧರ್ಮ ಬುದ್ಧಿ'ಯಿಂದ ಹುಟ್ಟಿದಂಥದು. ಆದ್ದರಿಂದ ಅದು ಸರಿ ಎಂದಾದರೆ ಇದೂ ಸರಿ.

ಇಲ್ಲಿ ಬಹಿಷ್ಕಾರ ಮತ್ತು ಪ್ರಾಯಶ್ಚಿತ್ತಕ್ಕೊಳಗಾದವರು ಸಾಮಾನ್ಯ ವ್ಯಕ್ತಿಗಳು; ಅಲ್ಲದೆ, ಇಂಥದನ್ನು ರಟ್ಟೆ ಬಲಕ್ಕಿಂತ, ಸಾವಧಾನದಿಂದ, ವಿಚಾರದ ದೃಷ್ಟಿಯಿಂದ ಎದುರಿಸುವಂಥವರು. ಅದೇ ಅವರು 'ಗಣ್ಯ'ರೆನ್ನಿಸಿಕೊಂಡವರೋ, ಶ್ರೀಮಂತರೋ, ಪುಡಾರಿಗಳೋ ಅಥವಾ ದಾರಿಯಲ್ಲಿ ಅಡ್ಡಗಟ್ಟಿ, "ಏನು....?" ಎಂತ ಕೇಳುವವರೋ ಆಗಿರುತ್ತಿದ್ದರೆ ಈ ಎಲ್ಲ 'ಧಾರ್ಮಿಕ ಕಾರ್ಯಕ್ರಮ'ಗಳು ನಡೆಯುತ್ತಿದ್ದವೆ?

ಈ ಸಂದರ್ಭದಲ್ಲಿ ವಿವೇಕಾನಂದರ ಮಾತುಗಳು ನೆನಪಿಗೆ ಬರುತ್ತವೆ—

"ಧರ್ಮದ ಕೆಲಸ ಆತ್ಮಕ್ಕೆ ಸಂಬಂಧಪಟ್ಟದ್ದು. ಸಾಮಾಜಿಕ ನೀತಿಗಳಲ್ಲಿ ಕೈ ಹಾಕಲು ಅದಕ್ಕೆ ಹಕ್ಕಿಲ್ಲ. ಹಿಂದೆ ಆಗಿರುವ ಅನರ್ಥಗಳಲ್ಲಿ ಇದು ಹೇಗಿದೆ ಎಂದರೆ, ಇನ್ನೊಬ್ಬನ ಆಸ್ತಿಯನ್ನು ಬಲಾತ್ಕಾರದಿಂದ ಅಪಹರಿಸಿ ಪುನಃ ಅವನು ಅದನ್ನು ತೆಗೆದುಕೊಳ್ಳಲು ಬಂದಾಗ ಮಾನವನ ಹಕ್ಕಿನ ಪವಿತ್ರತೆಯನ್ನು ಕೂಗಿ ಹೇಳುವಂತಿದೆ."

"ಪ್ರತಿಯೊಂದು ಸಾಮಾಜಿಕ ವ್ಯವಹಾರದಲ್ಲೂ ಪುರೋಹಿತನು ಕೈಹಾಕುವುದಕ್ಕೆ ಅವನಿಗೆ ಯಾವ ಅಧಿಕಾರವಿದೆ? ಇದರಿಂದ ಕೋಟ್ಯಾನು ಕೋಟಿ ಮಾನವರು ದುಃಖ ಪಡಬೇಕಾಗಿದೆ."

(ರಾಮಕೃಷ್ಣಾಶ್ರಮದವರು ಪ್ರಕಟಿಸಿರುವ 'ವಿವೇಕಾನಂದರ ಪತ್ರಮಾಲೆ' ಪುಸ್ತಕದ 59 ನೇ ಪತ್ರದಲ್ಲಿದೆ)

[ವಿವೇಕಾನಂದರ ಬರಹಗಳಲ್ಲಿ 'ಪುರೋಹಿತ' ಎಂದರೆ 'ಪೌರೋಹಿತ್ಯ ಮಾಡುವ ಬ್ರಾಹ್ಮಣರು' ಎಂಬ ಅರ್ಥ ಮಾತ್ರ ಅಲ್ಲ. ಎಲ್ಲಾ ಧರ್ಮದ 'ಯಜಮಾನ'ರನ್ನೂ ಕುರಿತು ಅವರು ಈ ಶಬ್ದ ಬಳಸುತ್ತಾರೆ. "ಧರ್ಮ ಎಂಬುದು ನನ್ನ ಕೈಯಲ್ಲಿರುವ ಇದಿಷ್ಟು ಕಟ್ಟು ಪಾಡುಗಳ ಒಳಗಿದೆ. ಇದರಂತೆ ನೀನು ನಡೆದು ಕೊಂಡರೆ ನೀನು ಧರ್ಮ ಆಚರಿಸಿದಂತೆ" ಎಂಬರ್ಥದ ಉಪದೇಶ ನೀಡುವ ಎಲ್ಲರೂ ಇದರಲ್ಲಿ ಬರುತ್ತಾರೆ]

ಮದುವೆ ಒಂದು ಕೌಟುಂಬಿಕ ವಿಷಯ ಆ ಸಂಬಂಧವಾಗಿ ಯಾರೇ ಮೂಗು ತೂರಿಸಿದರೂ ಅದು ಹಸ್ತಕ್ಷೇಪವಾಗುತ್ತದೆ. ಅದರಲ್ಲೂ, ಒಂದು ಮದುವೆಯ ವಿಚಾರಕ್ಕೆ ಹತ್ತು ಮಂದಿ ಸೇರಿ ಆ ಕುಟುಂಬದವರು ಸಮಾಜದಲ್ಲಿ ಬೆರೆಯದಂತೆ ನಿರ್ಬಂಧಿಸುವುದು (ಅಧಿಕೃತವಾಗಿ ಬಹಿಷ್ಕಾರ ಎಂದು ಫರ್ಮಾನು ಹೊರಡಿಸದಿದ್ದರೂ ಸಹ), ಪ್ರಾಯಶ್ಚಿತ್ತ ಮಾಡಿಸುವುದು–ಇಂಥವೆಲ್ಲ ನಡೆದಾಗ ಅದು ಖಂಡಿತ ಒಂದು ಕುಟುಂಬದ ವಿಚಾರವಾಗಿ ಉಳಿಯದೆ, ಹತ್ತು ಮಂದಿಗೆ (ಸಮಾಜಕ್ಕೆ) ಸಂಬಂಧಿಸಿದ್ದಾಗುತ್ತದೆ. ಆಗ ಆ ಕುರಿತು ಇನ್ನೂ ಹತ್ತು ಜನ ವಿಮರ್ಶೆಯನ್ನೋ ಟೀಕೆಯನ್ನೋ ಮಾಡಲು ಅವಕಾಶವುಂಟಾಗುತ್ತದೆ. ಅದು ಯಾರಿಗೆ ಎಷ್ಟು ಕಹಿ–ಖಾರ ಆದರೂ ಅದಕ್ಕೆ ಏನೂ ಮಾಡಲು ಆಗುವುದಿಲ್ಲ.

(7ನೇ ಪುಟಕ್ಕೆ)

ತೆರೆದ ಮನಸ್ಸಿನ ಚರ್ಚೆ ಅಗತ್ಯ

(5ನೇ ಪುಟದಿಂದ)

ವಾತಾವರಣವನ್ನು ಮೂಡಿಸಬೇಕು. ನನಗೆ ಅನ್ನಿಸಿದಂತೆ ಅವರ ಈ ಭಾವನೆಗಳನ್ನು ಮೊಳಕೆಯಲ್ಲೇ ಕತ್ತರಿಸಿ, ಅವರಲ್ಲಿ ಜಾತೀಯ ವ್ಯಾಮೋಹ ಹೆಚ್ಚಾಗುವಂತೆ ಮಾಡುವಲ್ಲಿ, ಅನ್ಯ ಜಾತೀಯರೂ ಪರೋಕ್ಷವಾಗಿ ಕಾರಣರಾಗಿದ್ದಾರೆ. ಅವರ ಕದಡಿದ ಮನಕ್ಕೆ ಸಮಾಧಾನವನ್ನು ನೀಡುವ ಬದಲು ಇತರರು ಅವರನ್ನು ಕುಹಕದಿಂದ "ಹೇಗಾಯ್ತು ನೋಡು?" ಎಂಬಂತೆ ನಿಟ್ಟಿಸುವ ಅನುಭವ ನನಗೂ ಆಗಿದೆ.

ನಾನು ಊರಿನಲ್ಲಿ ಅನ್ಯ ಜಾತಿಯ ಕೆಲವರಲ್ಲಿ ಈ ವಿವಾಹದ ಬಗ್ಗೆ ವಿಚಾರ ಮಾಡಿದಾಗ, ಅವರಲ್ಲಿ ವಸ್ತುಸ್ಥಿತಿಯ ತಿಳಿವಿನ ಬದಲು, ಬ್ರಾಹ್ಮಣರು ತಾವಾಗಿಯೇ ಈಗ ಅನ್ಯ ಜಾತಿಯವರೊಡನೆ ಸಂಬಂಧ ಬೆಳೆಸಲು ಬರುತ್ತಿದ್ದಾರೆಂಬ, ಮೇಲರಿಮೆಯ ಭಾವನೆ ಕಂಡೆ. "ಅವರು ನಮ್ಮ ಮನೆಗಳಿಗೆ ಬಂದರೆ ಅಡ್ಡಿಯಿಲ್ಲ. ಆದರೆ ನಾವು ಮಾಡಿದ್ದನ್ನು ತಿನ್ನಬೇಕು" ಅಂದರೆ ಮಾಂಸವನ್ನೇ ತಿನ್ನಬೇಕು ಎಂಬ ಆಲೋಚನೆ ಕಂಡೆ. ಇಂಥದೇ ಭಾವನೆ ಅವರಲ್ಲಿದ್ದರೆ ಜಾತೀಯ ಸಾಮರಸ್ಯ ಎಲ್ಲಿ ಸಾಧ್ಯ?

ಇನ್ನು 'ವೇದಿಕೆ'ಯ 2-3 ಪ್ರತಿಕ್ರಿಯೆಗಳಲ್ಲಿ, ಒಂದು ಸಮುದಾಯವನ್ನು ದೂಷಿಸುವುದು, ಬರೀ ಅವರ ತಪ್ಪುಗಳನ್ನು ಮಾತ್ರ ಬೊಟ್ಟು ಮಾಡಿ ತೋರಿಸುವುದು ಮಾತ್ರ ಮಾಡಿದ್ದಾರೆನ್ನಿಸುತ್ತದೆ. ಆದರೆ, ಇಂಥ ಸಾಮಾಜಿಕ ವಿಷಯಗಳ ಚರ್ಚೆಯಲ್ಲಿ ಹೆಚ್ಚು ತೆರೆದ ಮನದೊಡನೆ ಎಲ್ಲರೊಡನೆ ಸಮಾನವಾಗಿ ವ್ಯವಹರಿಸುವುದು ಒಳ್ಳೆಯದು. ಇದಕ್ಕೆ ಕ್ರಮೇಣವಾಗಿಯಾದರೂ ಉತ್ತಮ ಪ್ರತಿಕ್ರಿಯೆ ಖಂಡಿತ ಸಿಗುತ್ತದೆ. ಇತರರನ್ನು ಟೀಕಿಸುವ ಮೊದಲು, ಟೀಕೆಗೊಳಪಡುವಂತಹದು ತನ್ನಲ್ಲಿಯೂ ಏನಾದರೂ ಇರಬಹುದೆಂದು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು

—ಶ್ರಿಂಗೇಶ್
ಹುಬ್ಬಳ್ಳಿ.

38. ಪತ್ರಿಕೆ ಜನತೆಗೆ ವಿಚಾರ ತಿಳಿಸುವ ಕಿಟಕಿ

ಸ್ನೇಹಿತರೆ,

ಈಗ್ಗೆ ಕೆಲವೊಂದು ದಿವಸಗಳಿಂದ 'ಮುಂಜಾವು'ನಲ್ಲಿ ನಿಮ್ಮ ಹೆತ್ತವರ ಮೇಲೆ ನಡೆದ ಬಹಿಷ್ಕಾರ, ಪ್ರಾಯಶ್ಚಿತ್ತ ಇತ್ಯಾದಿ ವರದಿಗಳನ್ನೂ ಅದಕ್ಕೆ ಪ್ರತಿಯಾಗಿ ಬಂದ ಕೆಲವೊಂದು ವಿಚಾರವಂತ ಓದುಗರ ಸಾಂತ್ವನದ ನುಡಿಗಳು-ವಿಮರ್ಶೆಗಳನ್ನೂ ಓದುತ್ತಾ ಬಂದೆ. ಇವುಗಳಲ್ಲಿ ಕಾವಳಿ ಲಕ್ಷ್ಮೀನಾರಾಯಣಪ್ಪನವರು ಬರೆದ ವಿಚಾರಗಳನ್ನು ನೋಡಿ ನನಗೆ ಸ್ವಲ್ಪ ಬರೆಯಬೇಕೆನ್ನಿಸಿತು. 21.6.87 ರ 'ಮುಂಜಾವು'ನಲ್ಲಿ ಅವರು ಬರೆದಿದ್ದಾರೆ– "ನಿಮ್ಮ ತಿಳುವಳಿಕೆಗಿಂತ ಶ್ರೀ ಶ್ರೀಗಳವರ ತಿಳುವಳಿಕೆ ಬಹಳ ಮೇಲಿದೆ. ನೀವು ಹಾಕಿದಂತಹ ಕನ್ನಡಕ ಹಾಕಿಕೊಂಡು ಮನಸ್ಸಿಗೆ ಕಂಡಂತೆಲ್ಲಾ ಬರೆದು ಪತ್ರಿಕೆ ನಡೆಸಿ ನಾವು ಜೀವನ ಹೊರೆಯಬೇಕಾದ್ದಿಲ್ಲ"

ವಯಸ್ಸಿನ ಅಂತರದ ಮೇಲೆ ಹೇಳುವುದಾದರೆ ನಾಗರಾಜರಿಗಿಂತ ಹರಿಹರಪುರ ಗುರುಗಳ ತಿಳುವಳಿಕೆ ಮೇಲಿರಬಹುದು. ಆದರೆ ಆಚಾರ–ವಿಚಾರಗಳ, ಜಾತೀಯತೆಯ ವಿಮರ್ಶಾತ್ಮಕ ದೃಷ್ಟಿಕೋನಗಳ ಅಂತರದಲ್ಲಿ ಹೇಳುವುದಾದರೆ ನಾಗರಾಜರಿಗಿಂತ ಗುರುಗಳು ಏನೂ ಹೆಚ್ಚಿಗೆ ತೂಕ ಬರಲಿಕ್ಕಿಲ್ಲ.

ಎರಡನೆಯದಾಗಿ, ಮನಸ್ಸಿಗೆ ಕಂಡಂತೆಲ್ಲಾ ಬರೆದು ಪತ್ರಿಕೆ ನಡೆಸಿ ಜೀವನ ಸಾಗಿಸಲೇಬೇಕಾದಂತಹ ಹೊಟ್ಟೆ ಹೊರೆಯುವ ಪ್ರಶ್ನೆ ನಾಗರಾಜರಿಗೂ ಬಂದಂತಿಲ್ಲ. ಪತ್ರಿಕೆಗಳು ಜನತೆಗೆ ವಿಚಾರಗಳನ್ನು ಬಹಿರಂಗಪಡಿಸುವ ಒಂದು ಸಾಮೂಹಿಕ ಕಿಟಕಿಯಂಥ ಸಾಧನವೇ ಹೊರತು ಬಾಯಿಗೆ ಬಂದಂತೆ ಬರೆಯಲು ರಾಜಕಾರಣಿಗಳ ಭಾಷಣದ ಭಿತ್ತಿಪತ್ರಗಳಲ್ಲ.

ಇನ್ನು ಎರಡನೆಯ ಪತ್ರ ಕೊಪ್ಪದ ಭುಜಂಗರಾಯರದ್ದು. ಅವರ ಪ್ರಕಾರ "ನಿಮ್ಮ

(7ನೇ ಪುಟಕ್ಕೆ)

39. ಜಾತ್ಯತೀತ ಸಮಾಜ ನಿರ್ಮಾಣದ ಚಳುವಳಿಗೆ ನಾಂದಿಯಾಗಲಿ

ಮಾನವ ವೈಜ್ಞಾನಿಕವಾಗಿ 21ನೇ ಶತಮಾನಕ್ಕೆ, ಚಂದ್ರಲೋಕಕ್ಕೆ ಹೊರಟದ್ದರೂ, ಇನ್ನೂ ಮನುಷ್ಯ ಮನುಷ್ಯನನ್ನೇ ಅರಿಯದೇ ತಾವೇ ದೊಡ್ಡವರು, ನಾವು ಹೇಳಿದಂತೆಯೇ ಎಲ್ಲಾ ಎನ್ನುವ "ಕೂಪ ಮಂಡೂಕ" ನೀತಿಯನ್ನನುಸರಿಸುವ ಹಂತದಲ್ಲೇ ನಾವಿದ್ದೇವಲ್ಲ!

ಪ್ರತಿಯೊಬ್ಬ ಮನುಷ್ಯ ಜೀವಿಯಲ್ಲೂ ಹರಿಯುವ ರಕ್ತ ಒಂದೇ ರೀತಿ, ಒಂದೇ ರೀತಿಯ ಕೈ, ಕಾಲು, ಕಣ್ಣುಗಳು— ಎಂಬಂತಹ ಪ್ರಾಕೃತಿಕ ಸತ್ಯವನ್ನೂ ಏಕೆ ಅರಿಯರೊ? ಇಲ್ಲಿಯವರೆಗೆ ನಡೆದ, ನಡೆಯುತ್ತಿರುವ ಘಟನೆಗಳನ್ನು ಅವಲೋಕಿಸಿದಾಗ ಕೆಲವು ಪ್ರಶ್ನೆಗಳನ್ನು ಈ ಕೆಲವು ಮಹಾತ್ಮರ ಮುಂದಿಡಬೇಕಾಗುತ್ತದೆ.

1. ವಿವಾಹವಾದ ವಧುವಿನ ತಂದೆ–ತಾಯಿಗಳು ಮನಃ ಪೂರ್ವಕವಾಗಿ ಒಪ್ಪಿದ್ದಲ್ಲದೆ ಸ್ವತಃ ವಧುವೇ ಈ ಮದುವೆಗೆ ಒಪ್ಪಿ ಆಗಿರುವಾಗ ಅದನ್ನು ಬಹಿಷ್ಕರಿಸಲು, ಮಗಳು ತಂದೆ – ತಾಯಿಗಳನ್ನು ನೋಡದಂತೆ ನಿಷೇಧ ಹೇರಲು ಇವರ್ಯಾರು?

2. ವಧುವಿನ ತಂದೆ ತಾಯಿಗಳಿಗೆ ಪಂಚಗವ್ಯ ನೀಡಿ ಶುದ್ಧೀಕರಿಸುವ ಬದಲು ಈ ಮಹಾತ್ಮರುಗಳು ವರ ಸಿದ್ದುಸ್ವಾಮಿಯವರನ್ನೇ 'ಶುದ್ಧೀಕರಿಸಿ' ತಮ್ಮ ಜಾತಿಗೇ ಸೇರಿಸಿಕೊಳ್ಳಲಾರರೇಕೆ?

3. ಸಾರ್ವಜನಿಕ ವೇದಿಕೆಗಳಲ್ಲಿ ಜಾತ್ಯತೀತ ಮಾತುಗಳನ್ನಾಡಿ ತಮ್ಮ ಮ(ಠ)ನಗಳಲ್ಲಿ ಅದೇ ಮಾತುಗಳನ್ನು ಸಮರ್ಥಿಸಲು ಅಥವಾ ಆ ಚಳಿಗೆ ತರಲು ಅಸಮರ್ಥರಾಗಿರುವವರಿಂದ ನಾವು ಏನನ್ನು ತಾನೇ ನಿರೀಕ್ಷಿಸಬಹುದು?

4. ಮನುಷ್ಯತ್ವ, ಮಾನವ ಪ್ರೇಮ ಇವುಗಳ ಅರ್ಥ ಈ ಮಹಾತ್ಮರಿಗೆ ತಿಳಿದಿದೆಯೆ? ತಿಳಿದಿದ್ದರೆ ಅವರು ತುಳಿದಿರುವ ದಾರಿ ಸರಿಯೆ?

5. ಮಾನವ ಧರ್ಮಕ್ಕಿಂತ ಮಿಗಿಲಾದ ಧರ್ಮ ಯಾವುದೂ ಇಲ್ಲ ಎನ್ನುವ ಒಂದು ಹುಲು ಜಾಗತಿಕ ಸತ್ಯ ಇವರಿಗಿನ್ನೂ ಬಿಂಬಿಸಿಲ್ಲವೆ?

6. ಈ ಘಟನೆಯಿಂದ ಇಬ್ಬರು ತರುಣಿಯರ ಸಾವಿಗೆ ಪರೋಕ್ಷವಾಗಿಯಾದರೂ ತಾವು ಕಾರಣೀಭೂತರಾದವರಲ್ಲ ಎಂಬ ಅಪರಾಧಿ ಮನೋಭಾವನೆ ಇವರಿಗೆ ಬಂದಿಲ್ಲವೆ?

ಕೇವಲ ಪೂರ್ವಗ್ರಹ ಪೀಡಿತರಾಗಿ ತಾವೇನೋ ಮಹತ್ತರವಾದುದನ್ನು ಸಾಧಿಸುತ್ತಿದ್ದೇವೆ, ತಮ್ಮ ದಾರಿಯೇ ಸರಿ ಎಂಬಂತಹ ಭಂಡ ನಿಲುವನ್ನು ಇವರು ತಾಳಿದ್ದೇ ಆದರೆ ತಮ್ಮ ಸಮಾಧಿಗೆ ತಾವೇ ಕಲ್ಲೆಳೆದುಕೊಂಡಂತೆ. ಇಂತಹವರನ್ನು ಇತಿಹಾಸ ಎಂದಿಗೂ ಕ್ಷಮಿಸದು. ಮಾನವೀಯ ಭಾವನೆಗಳನ್ನು ಅರ್ಥಮಾಡಿಕೊಳ್ಳದೆ ಗಾಳಿಗೆ ತೂರಿ ತಮಗೆ ತಾವೇ ಇರಿದುಕೊಂಡಿರುವ ಅರಿವು ಇವರಿಗೆ ಮುಂದೊಂದು ದಿನ ಆಗುವುದರಲ್ಲಿ ಸಂಶಯವಿಲ್ಲ.

ಏನೇ ಇರಲಿ, ಈಗ ನಡೆದಿರುವ ಹಾಗೂ ಮುಂದೆ ನಡೆಯುವ ಇಂತಹ ಎಲ್ಲಾ ಉತ್ತಮ ಕಾರ್ಯಗಳಿಗೆ (ವಿವಾಹದಂಥ)

(7ನೇ ಪುಟಕ್ಕೆ)

ವೇದಿಕೆ

ವಿಚಾರ ತಿಳಿಸುವ ಕಿಟಕಿ

(6ನೇ ಪುಟದಿಂದ)
ವೈಯುಕ್ತಿಕ ಸಮಸ್ಯೆಯನ್ನು ನಿಮ್ಮ ಪತ್ರಿಕೆಯಲ್ಲೇ ಕೊಟ್ಟಿದ್ದೀರಿ" (ತಾ|| 5-7-87 ರ 'ಲಂಕೇಶ್'ನಲ್ಲಿಯೂ ಬಂದಿದೆ ಎಂಬುದು ನೆನಪಿರಲಿ.) ಇದು ನಾಗರಾಜರ ಒಂದು ಮನೆಯ ವೈಯುಕ್ತಿಕ ಸಮಸ್ಯೆಯಾಗಿ 'ಮುಂಜಾವು'ನಲ್ಲಿ ಮೂಡಿ ಬಂದಿಲ್ಲ. ಜಾತಿ, ಮತ, ಧರ್ಮದ ಹೆಸರಿನಲ್ಲಿ ಮುಗ್ಧ ಜನತೆಯು ಕಗ್ಗೊಲೆಗಳಲ್ಲಿ ಸಮಾಜದ ಗಣ್ಯ ವ್ಯಕ್ತಿಗಳೇ ಪಾಲ್ಗೊಂಡು, ಕೆಲವು ಸುಂದರ ಸಂಸಾರಗಳ ಸಂತೋಷವನ್ನು ನರಕ ಸದೃಶವನ್ನಾಗ ಮಾಡುತ್ತಿರುವ ಒಂದು ಸಮಾಜದ ಸಮಸ್ಯೆಯಾಗಿ ಮೂಡಿಬಂದಿದೆ.

ಇದನ್ನೆಲ್ಲ ಓದುಗರ ಗಮನಕ್ಕೆ ತಂದ 'ಮುಂಜಾವು'ಗೆ ಶುಭ ಹಾರೈಸುವೆ.

—ಚಾನಲ್ಮನೆ ಸತೀಶ್, ಶಿವಮೊಗ್ಗ

40. ಸಾವಿರಾರು ಯುವಜನ ಬೆಂಬಲಿಸುವ ಕಾರ್ಯ

ಪ್ರಿಯ ಸಂಪಾದಕರೆ,

ಪತ್ರ ಬರೆದ ಕೆಲವರು "ನಿಮ್ಮ ಮನೆ ಜಗಳ ಬೀದಿಗೇಕೆ?" ಎಂದು ಕೇಳಿದ್ದಾರೆ. ಅವರಿಗೆ ನಾನು ಕೇಳಬಯಸುತ್ತೇನೆ— "ಸ್ವಾಮಿ. ನಿಮ್ಮ ಗದ್ದೆ ಜಗಳ, ನೀರು ಕಾಲುವೆ ಜಗಳವನ್ನೆಲ್ಲ ಕೋರ್ಟು, ಪಂಚಾಯ್ತಿ ಕಟ್ಟೆ ಹತ್ತಿಸಿ, ಊರವರನ್ನೂ ಎಳೆದು, ಊರನ್ನೂ ಹೊಲಸು ಮಾಡಿ, ಅದನ್ನೊಂದು ಸಾಮಾಜಿಕ ಸಮಸ್ಯೆಯೆಂಬಂತೆ ಪತ್ರಿಕೆಗಳ ಪುಟಗಳಿಗೂ ಹತ್ತಿಸುವ ನೀವುಗಳು, ಸಮಾಜದಲ್ಲೊಂದು ದಾರಿದೀಪವಾಗುವಂತಹ ಇಂಥ ಸುಧಾರಣಾವಾದಿ ಕೆಲಸದ ವಿರುದ್ಧ ಅಲ್ಲಸಲ್ಲದ ಸನ್ನಿವೇಶ ಸೃಷ್ಟಿಸಿ ಅದು ಪತ್ರಿಕೆಯಲ್ಲಿ ಬೆಳಕು ಕಾಣುವಂತೆ ನೀವೇ ಮಾಡಿಕೊಂಡು ಈಗ ಅದನ್ನೇ ಟೀಕಿಸುತ್ತಿದ್ದೀರಲ್ಲ. ಒಂದು ಕ್ಷಣ ನಿಂತು ಯೋಚಿಸಿ ಹೇಳಿ, ಎಲ್ಲಿ ಕೆಡುಕಿದೆ? ಎಲ್ಲಿ ಪಿಡುಗಿದೆ?"

ಇನ್ನೊಬ್ಬರು ಪತ್ರದಲ್ಲಿ, "ಸ್ವಾಮೀಜಿಯವರನ್ನೇಕೆ ವೃಥಾ ಎಳೆಯುತ್ತೀರಿ?" ಎಂದು ಕೇಳಿದ್ದಾರೆ ಸಮಾಜದ ಯಾವ ಪುರುಷಾರ್ಥ ಸಾಧನೆಗಾಗಿ ಈ ಮಠಗಳು ಸ್ಥಾಪನೆಯಾದವೋ, ಅದರ ಮೂಲ ಉದ್ದೇಶದ ತುಣುಕಾದರೂ ಈ ಅಧಿಪತಿಗಳಿಗೆ ಅರಿವಿದ್ದರೆ ಈ ಭರತ ಖಂಡದ ಜನ ಹೀಗಾಗುತ್ತಿರಲಿಲ್ಲ. **ಮಾನವ ಧರ್ಮದ ಉಳಿವಿಗಾಗಿ ಯತ್ನಿಸಬೇಕಾದ ಮಠಗಳು ಕೆಲವೇ ಪಟ್ಟಭದ್ರ ಹಿತಾಸಕ್ತಿಗಳ ಕಪಿಮುಷ್ಟಿಯೊಳಗೆ ನರಳಾಡುವುದರಲ್ಲಿ** ಈ ಸ್ವಾಮಿಗಳ ಪಾತ್ರವೆಷ್ಟು?

ಆತ್ಮೀಯರೆ, ನಿಜವಾದ ಸದಾಚಾರವಂತರಲ್ಲದ, **ಬರೀ ಮಡಿವಂತರಾದ** ಕೇವಲ ಬೆರಳೆಣಿಕೆಯಷ್ಟು ಜನರಿಂದ ಬಂದ ವಿರೋಧ ಹೇಳಿಕೆಗಳನ್ನು ಬಿಟ್ಟರೆ, ನಮ್ಮಂಥ ನೂರಾರು, ಸಾವಿರಾರು ಯುವಕರ ತುಂಬು ಬೆಂಬಲ ಇಂಥ ಕಾರ್ಯಗಳಿಗಿದೆ. ನಿಮ್ಮಿಂದ ಪ್ರೇರಿತರಾಗಿ ನೂರಾರು ಯುವಕ-ಯುವತಿಯರು ಈ ಹಾದಿ ಹಿಡಿಯಲೆಂದು ಹಾರೈಸುತ್ತ ನಿಮ್ಮನ್ನು ಅಭಿನಂದಿಸುತ್ತೇನೆ.

—ಗೋಪಾಲ್ ಎಸ್. ಎಡಿಗೆರೆ,
ಸೀತೂರು-ನ.ರಾ.ಪುರ

'ಧರ್ಮೋದ್ಧಾರ'ದ ಬಹಿಷ್ಕಾರ !

(6ನೇ ಪುಟದಿಂದ)
ಬಹಿಷ್ಕಾರ, ಪ್ರಾಯಶ್ಚಿತ್ತ ವಗೈರೆ ನಡೆಯಲೇ ಇಲ್ಲ, ಎಲ್ಲಾ ಸುಳ್ಳು-ಎಂದು ಯಾರಾದರೂ ಓದುಗರಾದ ನಮಗೆ ಹೇಳುವುದಾದರೆ, ಅವರು ಎಷ್ಟು ಸುಳ್ಳರೆಂಬುದನ್ನು ಅವರೇ ಸಾಬೀತು ಮಾಡಿದಂತಾಗುತ್ತದೆ. ಯಾಕೆಂದರೆ ಆರಂಭದಿಂದಲೂ 'ಮುಂಜಾವು' ಓದುಗರಾದ ನಮಗೆ ಸುಳ್ಳನ್ನು ಹೀಗೆಲ್ಲ ಲಂಬಿಸುವ ಆಗತ್ಯ ಈ ಪತ್ರಿಕೆಗೆ ಇಲ್ಲ ಎಂಬುದು ನಮಗೆ ಸ್ವಚ್ಛವಾಗಿ ಗೊತ್ತಿದೆ. ಅಲ್ಲದೆ, ಹಾಗೆಲ್ಲ ನಡೆದಿದೆ ಎಂಬುದಕ್ಕೆ ನಾಗರಾಜರ ತಂದೆಯ ಹೆಸರಲ್ಲಿ 'ಶೃಂಕೊಸ'ದಲ್ಲಿ ಪ್ರಕಟವಾದ ಪ್ರಕಟಣೆಯಲ್ಲೇ ಸಾಕಷ್ಟು ಮಾಹಿತಿ ದೊರಕುತ್ತದೆ.

ಮತ್ತೆ ಕೂಡ, ಒಂದು ವೇಳೆ ಈ ವಿಚಾರ ಅವರ ಕುಟುಂಬದ್ದೇ ಎಂದಿಟ್ಟುಕೊಳ್ಳುವುದಾದರೆ—ಆಗಲೂ, ಅವರ ಮುಪ್ಪಿನ ತಂದೆ-ತಾಯಿಗಳಿಗೆ ಯಾರಾದರೂ ಏನಾದರೂ ಮಾಡಿ ಮಾನಸಿಕ ಹಿಂಸೆ ಕೊಟ್ಟರೆ ಅದು ಮಗನಾದ ಇವರಿಗೆ ಏನೂ ಸಂಬಂಧವಿಲ್ಲದ್ದೆ? ಬೇರೆಯವರಿಗೆ ಆದ ಅನ್ಯಾಯ, ದೌರ್ಜನ್ಯಗಳನ್ನು ಇವರ ಪತ್ರಿಕೆ ಸಾರ್ವಜನಿಕರಿಗೆ ತಿಳಿಸಬಹುದಾದರೆ, ತಮ್ಮದೇ ಕುಟುಂಬದ ಮೇಲೆ ನಡೆದ ದೌರ್ಜನ್ಯವನ್ನು ಅವರು ನಾಲ್ಕು ಜನರ ಜೊತೆ **ಹಂಚಿಕೊಳ್ಳುವುದಕ್ಕೆ** ಇವರಿಗೆ ಪತ್ರಿಕೆಯಿರುವುದೇ **ಅಡ್ಡಿಯಾಗಬೇಕೆ?** (ಈ ವಿಚಾರ **'ಮುಂಜಾವು'**ನಲ್ಲಿ ಮಾತ್ರವಲ್ಲ, ಇತರ ಕಡೆಯೂ **ಪ್ರಕಟ**ವಾಯಿತಲ್ಲ. ಪ್ರಕಟಿಸಬಲ್ಲ ಸಾರ್ವಜನಿಕ ವಿಚಾರ ಅಲ್ಲವಾಗಿದ್ದರೆ ಪ್ರಕಟವಾಗುತ್ತಿರಲಿಲ್ಲವಷ್ಟೆ?)

ಸಮಾಜದಲ್ಲಿರುವ ಜಾತಕ – **ಪಾತಕ**, ವರದಕ್ಷಿಣೆಗಳಂಥ ಅನಿಷ್ಟಗಳಿಂದ **ಹೆಣ್ಣು**ಮಕ್ಕಳು 30 ವರುಷ ದಾಟಿದರೂ **ಮದುವೆ** ಕಾಣದೆ ಕೊರಗುವಂತಾಗಿರುವುದರ ಪರಿಹಾರಕ್ಕಾಗಿ ಮುಖಂಡರುಗಳೂ ಧರ್ಮಗುರುಗಳೂ ಪ್ರಯತ್ನಿಸಿದರೆ, ಇವರು ಸಮಾಜದ ಉದ್ಧಾರದ ಮೊದಲನೇ ಕೆಲಸ ಮಾಡಿದಂತಾಗುತ್ತದೆ. ಅಲ್ಲದೆ ಅದು ಸಮಾಜಕ್ಕೊಂದು ಪಾಠವೂ, ಇತರ ಮುಖಂಡರು-ಗುರುಗಳಿಗೊಂದು ಪೇಲ್ಪಂಕ್ತಿಯೂ ಆಗುತ್ತದೆ. ಇವರುಗಳು ಸಮಾಜಕ್ಕೆ ಕಲಿಸುವುದಿದ್ದರೆ ಇಂಥ ಪಾಠ ಕಲಿಸಲಿ. ಯಾರನ್ನೋ ಉಸಿರುಗಟ್ಟಿಸಿ ಬೇರೆಯವರಿಗೂ ಭಯವುಂಟಾಗುವಂತೆ ಮಾಡಿ ಆ ಭಯದ 'ಪಾಠ' ಕಲಿಸುವುದಲ್ಲ.

—ಕೆ. ಗಣೇಶ ಪಟವರ್ಧನ್,
ಕೊಪ್ಪ

ಜಾತ್ಯತೀತ ಚಳುವಳಿಗೆ ನಾಂದಿಯಾಗಲಿ

(6ನೇ ಪುಟದಿಂದ)
ನಮ್ಮಂಥ ಯುವಕರ ಹಾಗೂ ಎಲ್ಲ ವಿಚಾರವಂತರ ಬೆಂಬಲ ಸಂಪೂರ್ಣ ದೊರೆಯಬೇಕಿದೆ. ಈ ಒಂದು ಘಟನೆ ಜಾತ್ಯತೀತ ಸಮಾಜದ ಬೆಳವಣಿಗೆಯ ಚಳುವಳಿಗೆ ನಾಂದಿಯಾಗಲಿ. ಆದರೆ ಇವೆಲ್ಲಕ್ಕೂ **ನಾವೆಲ್ಲರೂ ಕೂಡಿ ಹೋರಾಡಬೇಕಿದೆಯಲ್ಲವೇ?**

—ಎಂ.ಕೆ.ಹರೀಶ ಕಡತೂರು
ಬೆಂಗಳೂರು-70

[ಹೌದು ಗೆಳೆಯರೆ, ನೀವುಗಳೇ ಕೂಡಬೇಕಿದೆ. ಇಂಥ ವಿಚಾರಗಳನ್ನೆಲ್ಲ ಒಪ್ಪುವ ನಿಮ್ಮಂಥ ಎಲ್ಲ ಯುವಕರೂ ಕಡೇ ಪಕ್ಷ— ನಾನು ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ, ನನಗೆ ಅರ್ಥವಿಲ್ಲವೆಂದು ಗೊತ್ತಿರುವ ಯಾವುದೇ ಸಂಪ್ರದಾಯವನ್ನೂ ಮದುವೆಯಲ್ಲಾಗಲಿ, ಜೀವನದಲ್ಲಾಗಲಿ ಅನುಸರಿಸುವುದಿಲ್ಲ ಹಾಗೂ ನಾನು ಮದುವೆಯಾಗುವ ಹುಡುಗಿ ಯಾವ ಜಾತಿಯಲ್ಲೇ-ನೀವು ಹುಟ್ಟಿದ ಜಾತಿಯೂ ಸೇರಿದಂತೆ—ಹುಟ್ಟಿದವಳಾಗಿರಲಿ, ಜಾತಿವಾದಿಯಾಗಿರಬಾರದು, ಅಂದರೆ ಯಾವುದೇ ವಿಚಾರದಲ್ಲಿ ಜಾತೀಯತೆ ಆಚರಿಸುವವಳಾಗಿರಬಾರದು — ಎಂಬ ಇವಿಷ್ಟು ನಿಯಮಗಳನ್ನಾದರೂ ಹಠದಿಂದ ಪಾಲಿಸಬೇಕಿದೆ.

ಇಷ್ಟನ್ನಾದರೂ ಮಾಡಲಾಗದೆ, ಅದಕ್ಕೆ ಯಾವುದೇ ನೆಪ ಅಥವಾ ಸಮರ್ಥನೆ ಕೊಡುವವರು ಇಂಥದನ್ನೆಲ್ಲ ಯೋಚಿಸಿ ಅಥವಾ ಬೆಂಬಲಿಸಿಯೂ ವ್ಯರ್ಥ— ನಾಯಿ ಮೊಲೆಯ ಹಾಲಿನಂತೆ, ಊಟಕ್ಕಿಲ್ಲದ ಉಪ್ಪಿನಕಾಯಿಯಂತೆ — ಅಲ್ಲವೆ?

ಆದ್ದರಿಂದಲೇ, 'ನಾವೆಲ್ಲರೂ' ಎಂದು ನೀವು ಗುರುತಿಸಿಕೊಂಡಿರುವುದು ಬಹಳ ಶ್ಲಾಘನೀಯ. ಯಾವುದೇ ವಿಚಾರದಲ್ಲಿ ತನ್ನನ್ನೂ ಒಳಗೊಂಡು ಯೋಚಿಸುವ ನಿಮ್ಮಂಥ ಇಂಥ ಎಲ್ಲರಿಗೂ ಭವಿಷ್ಯ ಕೈಬೀಸಿ ಕೂಗಿ ಹೇಳುವ ಮಾತು: "ಹೆಜ್ಜೆ ಹಿಂದೆಗೆಯಬೇಡಿ!" **—ಸಂಪಾದಕ.**]

ಓದುಗರ ಪತ್ರ

ತಸ್ತೀಕ್ ಹಣ ಬಿಡುಗಡೆಗೆ ಸಚಿವರ ಆದೇಶ

ಮಾನ್ಯರೆ,

ಕೊಪ್ಪ ತಾಲ್ಲೂಕು ಧಾರ್ಮಿಕ ಸಂಸ್ಥೆಗಳ ಸಂಚಾಲಕರ ಸಮಿತಿಯ ಪರವಾಗಿ ತಾ|| 17.7.1987 ರಂದು ಮುಜರಾಯಿ ಮಂತ್ರಿಗಳಾದ ಅಮರನಾಥ ಶೆಟ್ಟಿ ಮತ್ತು ಧಾರ್ಮಿಕ ದತ್ತಿ ಕಮೀಷನರ್‌ರನ್ನು ಭೇಟಿ ಮಾಡಿ, ಸರ್ಕಾರದಿಂದ ಅರ್ಚಕರಿಗೆ ಪೂಜೆ ಬಗ್ಗೆ ಸಲ್ಲಬೇಕಾದ ಅಲ್ಪ ಮೊತ್ತದ ತಸ್ತೀಕ್ ಹಣವೂ ಸಕಾಲಕ್ಕೆ ದೊರಕದಿರುವುದನ್ನು ವಿವರಿಸಿ. ಜಾಗ್ರತೆ ಕೊಡಿಸಲು ಮನವಿ ಸಲ್ಲಿಸಲಾಯಿತು ಈ ಹಣವನ್ನು ವಿಳಂಬವಿಲ್ಲದೆ ಬಟವಾಡೆ ಮಾಡಲು ಸುತ್ತೋಲೆ ಕಳಿಸುವಂತೆ ಸಚಿವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರಲ್ಲದೆ, ಈ ಬಗ್ಗೆ ವಿವರವಾದ ಪಟ್ಟಿಮಾಡಿ ಕಳಿಸಿದರೆ, ಕೂಡಲೇ ಹಣ ಕೊಡಿಸುವ ವ್ಯವಸ್ಥೆ ಮಾಡುವುದಾಗಿ ತಿಳಿಸಿದ್ದಾರೆ. ಯಾವುದೇ ಕಾರಣಕ್ಕೂ ಈ ಹಣವನ್ನು ತಡೆಹಿಡಿಯುವುದಾಗಲೀ, ಕೇವಣಿ ಹಾಕುವುದಾಗಲೀ ಮಾಡಕೂಡದೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸುತ್ತೋಲೆ ಕಳಿಸಲು ಕಮೀಷನರ್‌ಗೆ ತಿಳಿಸಿದ್ದಾರೆ.

—ಜೆ. ಪಿ. ನೀಲಕಂಠ ಭಟ್ಟ
ಹರಿಹರಪುರ

ಶಂಕರ್ ಕಾರ್ಮಿಕರ ಮುಷ್ಕರ

(1ನೇ ಪುಟದಿಂದ)

ಅನಂತರ ಕೆ. ವಿ. ರಾಮಪ್ಪಯ್ಯ, ಕಚ್ಚೋಡಿ ಶ್ರೀನಿವಾಸ್, ಕಲ್ಕುಳಿ ವಿಠಲ್ ಹೆಗ್ಡೆ ಮುಂತಾದವರಿದ್ದ ಅಲ್ಲಿನ ಸರ್ವಪಕ್ಷ ನಿಯೋಗವೊಂದು ಕೊಪ್ಪದಲ್ಲಿ ರಮೇಶ ರಾವ್ ಅವರನ್ನು ಭೇಟಿ ಮಾಡಿ ಬೇಡಿಕೆ ಬಗ್ಗೆ ಸಂಧಾನ ಮಾಡಿಕೊಳ್ಳಲು ಸೂಚಿಸಿದ್ದಕ್ಕೆ ರಮೇಶ ರಾವ್ ಒಪ್ಪದಿದ್ದಾಗ, "ಹಾಗಿದ್ದರೆ, ನಿಮ್ಮ ವಿವಾದ ಇತ್ಯರ್ಥವಾಗುವವರೆಗೆ ಅಂದರೆ ಎಲ್ಲಾ ಬಸ್ಸುಗಳನ್ನೂ ಓಡಿಸಲು ನಿಮಗೆ ಸಾಧ್ಯವಾಗುವವರೆಗೆ ಯಾವುದೇ ಬಸ್ಸುಗಳನ್ನು ನಮ್ಮ ತಾಲ್ಲೂಕಲ್ಲಿ ಓಡಿಸಬಾರದು" ಎಂದು ತಾಕೀತು ಮಾಡಿ ನಿಯೋಗ ಹಿಂದಿರುಗಿತು.

ಆಡಳಿತಾಧಿಕಾರಿ ತಬ್ಬಿಬ್ಬು!

ಅಂದೇ ರಾಜ್ಯ ಮತ್ತು ಜಿಲ್ಲಾ ಪತ್ರಿಕೆಗಳ ಪ್ರತಿನಿಧಿಗಳು ಕಂಪೆನಿಯ ಮಾಲೀಕರನ್ನು ಭೇಟಿಯಾಗಲು ಬಂದಾಗ "ಮಾಲೀಕರ ಪರವಾಗಿ" ನೂತನ ಆಡಳಿತಾಧಿಕಾರಿ ನಂಜುಂಡಯ್ಯ ಮಾತನಾಡುತ್ತ ಹಲವು ಸತ್ಯ ಮರೆಮಾಚುವ 'ಹೇಳಿಕೆ'ಗಳನ್ನು ಕೊಡತೊಡಗಿ, ಪತ್ರಕರ್ತರ ಪ್ರಶ್ನೆಗಳಿಂದ ತಬ್ಬಿಬ್ಬಾದರು.

ಡೆಪ್ಯುಟಿ ಲೇಬರ್ ಕಮಿಶನರ್ ಆಗಿದ್ದು ನಿವೃತ್ತರಾಗಿ ಇಲ್ಲಿ ಉದ್ಯೋಗಕ್ಕೆ ಬಂದಿರುವ ಅವರು, ನವೆಂಬರ್ 86ರ ವರೆಗೂ ಕಾರ್ಮಿಕರಿಗೆ ಮನೆ ಬಾಡಿಗೆ ಭತ್ಯ, ದಿನ ಭತ್ಯ, ಇಂಕ್ರಿಮೆಂಟ್ ಮುಂತಾದುವೆಲ್ಲ "ಬಹಳ ಕಮ್ಮಿಯಿತ್ತು" ಎಂಬುದನ್ನು ಒಪ್ಪಿಕೊಂಡರು. ನವೆಂಬರಿನಲ್ಲಿ ಕಾರ್ಮಿಕರ ಒಂದು ಸಂಘದೊಡನೆ ಒಪ್ಪಂದ ಮಾಡಿಕೊಂಡು ಹಲವು ರಿಯಾಯಿತಿಗಳನ್ನು ಕೊಟ್ಟಿರುವುದಾಗಿ ಹೇಳಿದರು. ಕಾರ್ಮಿಕರು ಮಾಡಿದ್ದ ಎಲ್ಲ ಆಪಾದನೆಗಳನ್ನೂ ಯಥಾಶಕ್ತಿ ಅಲ್ಲಗಳೆಯುತ್ತ "ಕಾರ್ಮಿಕರ ಹಿತ ಕಾಯುವುದಕ್ಕೆಂತಲೇ ತಾನಿಲ್ಲಿಗೆ ಬಂದಿರುವುದಾಗಿ" ಘೋಷಿಸಿದರು.

ಪಂಪಾಪತಿ ಭೇಟಿ

ಶಂಕರ್ ಕಾರ್ಮಿಕರ ಸಂಘಕ್ಕೆ ಅಧ್ಯಕ್ಷರೂ ಆಗಿರುವ ಹಿರಿಯ ಕಾರ್ಮಿಕ ನಾಯಕ ಮತ್ತು ಕಮ್ಯುನಿಸ್ಟ್ ಶಾಸಕ ಪಂಪಾಪತಿಯವರು ಜು. 25 ರಂದು ಬಾಳೆಹೊನ್ನೂರು, ಶೃಂಗೇರಿ, ಕೊಪ್ಪಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿ, ಕಾರ್ಮಿಕರ ಬೇಡಿಕೆಗಳು ಹೇಗೆ ನ್ಯಾಯಬದ್ಧ ಮತ್ತು ಕನಿಷ್ಠ ಅವಶ್ಯಕತೆಯವು ಎಂಬುದನ್ನು ವಿವರಿಸಿ, ಹೋರಾಟಕ್ಕೆ ಸಾರ್ವಜನಿಕರು ಬೆಂಬಲವನ್ನು ಇದೇ ರೀತಿ ಮುಂದುವರಿಸಬೇಕೆಂದು ಕೇಳಿಕೊಂಡರು.

ಆಸ್ತಿ ಕೇಳುತ್ತಿಲ್ಲ

"ಕಾರ್ಮಿಕರೇನು ಕಂಪೆನಿಯ ಆಸ್ತಿ ಕೇಳುತ್ತಿಲ್ಲ. 30 ವರ್ಷಗಳಿಂದ ಕಾರ್ಮಿಕರ ದುಡಿಮೆಯಿಂದಾಗಿ ಕಂಪೆನಿಯ ಬಸ್‌ಗಳ ಸಂಖ್ಯೆ 20ರಿಂದ 70ಕ್ಕೇರಿದೆ. ಅದನ್ನೂ ಎಲ್ಲ ಕೊಟ್ಟು ಬಿಡಿ ಎಂತಲೂ ಕೇಳಿಲ್ಲ. ಒಂದೇ ಬಾರಿಗೆ ಸಾವಿರಗಟ್ಟಲೆ ಹಣವನ್ನೂ ಕೇಳಿಲ್ಲ. ಬೇರೆಲ್ಲೂ ಕೊಡದಿರುವಷ್ಟನ್ನೂ ಕೇಳಿಲ್ಲ. ಬೆಲೆ ಏರಿದೆ. ನಾವೂ ಮಕ್ಕಳು-ಮರಿ ಸಾಕಬೇಕು. ಬೇರೆಲ್ಲರೂ ಎಷ್ಟು ಕೊಡುತ್ತಾರೋ ಅಷ್ಟನ್ನಾದರೂ ಕೊಡಿ. ದಿನಕ್ಕೆ 8 ಗಂಟೆ ದುಡಿಮೆ ಎಂದು 1922ರಿಂದಲೇ ಕಾನೂನು ಬಂದಿದೆ. ಅಷ್ಟೇ ದುಡಿಸಿ. ಮನೆ ಬಾಡಿಗೆ, ವೈದ್ಯಕೀಯ ಸೌಲಭ್ಯ, ಅಗತ್ಯಕ್ಕೆ ತಕ್ಕಷ್ಟು ಎಲ್ಲರಂತೆ ರಜೆ, ಇತ್ಯಾದಿ ಕೇಳಿದ್ದಾರೆ. ಎಲ್ಲ ಒಟ್ಟು ಅಬ್ಬಬ್ಬಾ ಎಂದರೆ ತಿಂಗಳಿಗೆ 1000 ರೂ. ವೇತನ ಆಗಬಹುದು. ರಾಜ್ಯ ಸಾರಿಗೆಯಲ್ಲಿ ಹೊಸದಾಗಿ ಸೇರಿದ ಒಬ್ಬ ನೌಕರ 1200 ರೂ. ಪಡೆಯುತ್ತಾನೆ. ಇವತ್ತು ಅಷ್ಟಾದರೂ ಬೇಕು. ಅದರ ಜೊತೆಗೆ ರಜ, ಗ್ರಾಚ್ಯುಯಿಟಿ, ಭವಿಷ್ಯನಿಧಿ, ಬಟ್ಟೆ, ಬೋನಸ್, ಓವರ್ ಟೈಂ ಎಲ್ಲ ಇದೆ. (ಈ ಕಂಪೆನಿಯಲ್ಲಿ 10 ವರ್ಷ ಸರ್ವಿಸ್ ಆದ ಡ್ರೈವರ್ – ಕಂಡಕ್ಟರ್ 1120 ರೂ. ಪಡೆಯುತ್ತಾರಂತೆ ಬೇರೆಯವರಿಗೆ ಇನ್ನೂ ಕಮ್ಮಿ. ನಂಜುಂಡಯ್ಯನೇ ಒಪ್ಪಿಕೊಂಡಿದ್ದಾರೆ.)

ಹಾಗೆ ಏನನ್ನೂ ಕೊಡಲೊಪ್ಪದೆ "ಮುಷ್ಕರ ನಿಲ್ಲಿಸಿ" ಎಂದರೆ ಆಗೋಲ್ಲ. ಗೂಂಡಾಗಿರಿ, ಕುತಂತ್ರ ಬುದ್ಧಿಗಳಿಗೆಲ್ಲ ಬಗ್ಗೊಲ್ಲ. ಕೆಟ್ಟ ಹಟದಿಂದ ಏನೂ ಸಾಧನೆಯಾಗೋಲ್ಲ. ಆದರಿಂದ 15–20 ಸಾವಿರ ಜನ ಪ್ರಯಾಣಿಕರು ತೊಂದರೆಗೆ ಸಿಕ್ಕಿದ್ದಾರೆ. ಆದರೂ ಅವರು ಕಾರ್ಮಿಕರನ್ನು ಬೆಂಬಲಿಸುತ್ತಿದ್ದಾರೆಂದರೆ ಕಂಪೆನಿಯ ನಿಲುವು ಎಷ್ಟು ನ್ಯಾಯಬಾಹಿರ ಎಂಬುದು ಸಾಬೀತಾಗುತ್ತದೆ...."

ಸಾರ್ವಜನಿಕರ ಮತ್ತು ಕಾರ್ಮಿಕರ ಕರತಾಡನಗಳ ಮಧ್ಯೆ ಎಲ್ಲರ ಮನ ಮುಟ್ಟುವಂತೆ ಪಂಪಾಪತಿ ಮಾತನಾಡಿದರು ಅನಂತರ ರಾತ್ರಿ ಕಾರ್ಮಿಕರ ಜೊತೆ ವಿವರವಾಗಿ ಸಮಾಲೋಚನೆ ನಡೆಸಿದರು.

ಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ರೇಣುಕಾರಾಧ್ಯ ಮತ್ತು ಸಿಪಿಐ ಜಿಲ್ಲಾ ಕಾರ್ಯದರ್ಶಿ ಸುಂದರೇಶ್ ಮಾತನಾಡಿದರು.

ಕನಿಷ್ಠ ಕೂಲಿ

ಎಲ್ಲ ನಿರ್ಲಜ್ಜ ಬಂಡವಾಳಗಾರರೂ ಜನಸಾಮಾನ್ಯರನ್ನು ನಂಬಿಸಲು ಬಳಸುವುದು 'ಕನಿಷ್ಠ ಕೂಲಿ' ಕಾಯ್ದೆಯನ್ನು. ಆದರೆ ವಾಸ್ತವವೆಂದರೆ, ಅದಕ್ಕಿಂತ ಹೆಚ್ಚಿಗೆ ಕೊಡಬಾರದು ಎಂದು ಕಾನೂನು ಹೇಳುವುದಿಲ್ಲ ಅಷ್ಟನ್ನಾದರೂ ಕೊಡಲಾರದ ಸಂಸ್ಥೆಗಳು ಕಾರ್ಮಿಕರನ್ನೇ ಇಟ್ಟುಕೊಳ್ಳಲಾಗದು—ಎಂಬುದಷ್ಟೇ ಅದರ ಆಶಯ. ಜೀವನ ನಿರ್ವಹಣೆಯ ವೆಚ್ಚ, ಸಂಸ್ಥೆಯ ಆದಾಯ—ಈ ಎಲ್ಲವನ್ನೂ ಪರಿಗಣಿಸಿ ಎಲ್ಲ ಸಂಸ್ಥೆಗಳೂ ಕನಿಷ್ಠ ಕೂಲಿಗಿಂತ ಹೆಚ್ಚಿಗೆ ಕೊಡಲೇಬೇಕಾಗುತ್ತದೆ. ಇದು ಸಾಮಾಜಿಕ ನ್ಯಾಯ ಕೂಡ. "ದುಡಿದು ಸಂಸ್ಥೆಯನ್ನು ಬೆಳೆಸುವ ಕಾರ್ಮಿಕರಿಗೂ ಕನಿಷ್ಠವಾಗಿ ಕೊಟ್ಟು, ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ಸಹ ವಂಚನೆ-ಅನ್ಯಾಯ ಮಾಡಿ, ಎಲ್ಲವನ್ನೂ ದೋಚಿಕೊಳ್ಳಿ" ಎಂದು ಯಾವ ಕಾಯ್ದೆಯೂ ಹೇಳುವುದಿಲ್ಲ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿಕ್ಕಮಗಳೂರು, ಇವರ ನ್ಯಾಯಾಲಯದಲ್ಲಿ—

ಅರ್ಜಿದಾರರು :	ಎದುರು ಅರ್ಜಿದಾರರು :
ಅಧ್ಯಕ್ಷರು,	ಶ್ರೀ ಎಂ. ಎನ್. ಸಿದ್ದಪ್ಪಗೌಡ ಬಿನ್
ವ್ಯವಸಾಯ ಸೇವಾ ಸಹಕಾರ ಸಂಘ,	ನಾಗಪ್ಪಗೌಡ, ಕಾರ್ಯದರ್ಶಿ,
ನೆಮ್ಮಾರು, ಶೃಂಗೇರಿ ತಾಲ್ಲೂಕು.	ವ್ಯವಸಾಯ ಸೇವಾ ಸಹಕಾರ ಸಂಘ (ನಿ.),
	ನೆಮ್ಮಾರು, ಶೃಂಗೇರಿ ತಾಲ್ಲೂಕು.

ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, 1959 ರ ವಿಧಿ 103(1) ರ ಅನ್ವಯ ನೀಡಲಾಗಿರುವ ನಿಬಂಧನಾತ್ಮಕ ತೀರ್ಪು ಪೂರ್ವ ಜಪ್ತಿ ಆದೇಶವನ್ನು ಖಾಯಂ ಮಾಡಿ ಆದೇಶ ಹೊರಡಿಸುವುದು.

ಪ್ರಸ್ತಾವನೆ: ಶ್ರೀ ಎಂ. ಎನ್. ಸಿದ್ದಪ್ಪ ಗೌಡ, ಕಾರ್ಯದರ್ಶಿ, ವ್ಯವಸಾಯ ಸೇವಾ ಸಹಕಾರ ಸಂಘ, ನೆಮ್ಮಾರು, ಇವರು ಸಂಘದ ಸದಸ್ಯರಿಂದ ವಸೂಲಾದ ಸಾಲದ ಹಣವನ್ನು ಸಂಘಕ್ಕೆ ಜಮಾ ಮಾಡದೆ ಸುಮಾರು 50,000 ರೂ.ಗಳನ್ನು ಸ್ವಂತಕ್ಕೆ ಉಪಯೋಗಿಸಿಕೊಂಡಿರುವುದು ನಮ್ಮ ಗಮನಕ್ಕೆ ಬಂದಿರುತ್ತೆ. ಈ ಹಣದ ವಸೂಲಿಗಾಗಿ ಸಂಘದ ಅಧ್ಯಕ್ಷರ ಕೋರಿಕೆಯಂತೆ ಶ್ರೀ ಎಂ. ಎನ್. ಸಿದ್ದಪ್ಪ ಗೌಡರ ಸ್ಥಿರ ಆಸ್ತಿಗಳ ಮೇಲೆ ಸಹಕಾರ ಸಂಘಗಳ ಕಾಯಿದೆ ಕಾಲಂ 103(1) ರ ಅನ್ವಯ ತೀರ್ಪು ಪೂರ್ವ ಜಪ್ತಿ ಆದೇಶವನ್ನು ತಾ|| 28.5.87ರಂದು ಈ ಕಚೇರಿಯಿಂದ ಹೊರಡಿಸಲಾಗಿತ್ತು. ಈ ಆದೇಶದಲ್ಲಿ ಸ್ಥಿರ ಆಸ್ತಿಗಳ ಮಾರಾಟ ಮಾಡದಂತೆ ಮತ್ತು ವರ್ಗಾಯಿಸದಂತೆ ಸೂಚಿಸಲಾಗಿತ್ತು. ಸದರಿ ಆದೇಶದಿಂದ ಯಾರ ಹಕ್ಕಿಗೆ ಚ್ಯುತಿ ಬಂದದ್ದಾಗಲಿ ಅಥವಾ ಅವರ ಹಕ್ಕಿಗೆ ಧಕ್ಕೆಯಾಗುವುದಾದರೆ ಅಹವಾಲು ಸಲ್ಲಿಸಲು 30 ದಿನಗಳ ಕಾಲಾವಕಾಶ ನೀಡಲಾಗಿತ್ತು. ಈ ಆದೇಶವನ್ನು ಹಿಂದೆ ತೆಗೆದುಕೊಳ್ಳಲು ಬಯಸಿದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿಕ್ಕಮಗಳೂರು, ಇವರ ಹೆಸರಿನಲ್ಲಿ 50,000–00 ರೂ.ಗಳನ್ನು, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಶೃಂಗೇರಿ ಶಾಖೆಯಲ್ಲಿ ಉಳಿತಾಯ ಖಾತೆಯಲ್ಲಿ ಇಟ್ಟು, ಪಾಸ್ ಪುಸ್ತಕವನ್ನು 30 ದಿನಗಳಲ್ಲಿ ಸಲ್ಲಿಸಲು ಸೂಚಿಸಲಾಗಿತ್ತು. ಶ್ರೀ ಎಂ. ಎನ್. ಸಿದ್ದಪ್ಪ ಗೌಡರಿಗೆ ಈ ಆದೇಶವನ್ನು ತಾ 13–6–87ರಂದು ಜಾರಿ ಮಾಡಲಾಯಿತು. ಅವರು ತಾ|| 18–6–87 ರಂದು ಲಿಖಿತ ಉತ್ತರವನ್ನು ಕೊಟ್ಟಿರುತ್ತಾರೆ ಆದೇಶದಲ್ಲಿ ತಿಳಿಸಿರುವಂತೆ ಹಣವನ್ನು ಜಮಾ ಮಾಡಿರುವುದಿಲ್ಲ. ಪಾಸ್ ಪುಸ್ತಕವನ್ನು ಸಲ್ಲಿಸಿರುವುದಿಲ್ಲ. ಅವರು ಕೊಟ್ಟಿರುವ ಹೇಳಿಕೆಯು ಸಮಂಜಸವಾಗಿರುವುದಿಲ್ಲ. ಸದರಿ ಅಂಶಗಳ ಆಧಾರದ ಮೇರೆಗೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸಂಖ್ಯೆ/ಎ.ಆರ್.ಸಿ/ಕೆ.ಎಂ ಇ/1102/86–87 ತಾ|| 29–6–87

ಆ ದೇ ಶ

ಶ್ರೀ ಜಿ. ಎಸ್. ರಮಣರೆಡ್ಡಿ, ಎಂ.ಎ ,ಕೆ ಸಿ ಎಸ್., ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿಕ್ಕಮಗಳೂರು, ಆದ ನಾನು ತಾ|| 28-5-1987ರಂದು ಈ ಕಚೇರಿಯಿಂದ ಹೊರಡಿಸಿದ ಸಹಕಾರ ಸಂಘಗಳ ಕಾಯಿದೆ 1959ರ ವಿಧಿ 103(1) ರನ್ವಯ ನೀಡಲಾಗಿರುವ ನಿಬಂಧನಾತ್ಮಕ ತೀರ್ಪು ಪೂರ್ವ ಜಪ್ತಿ ಆದೇಶವನ್ನು ದೃಢೀಕರಿಸಿದ್ದೇನೆ. ಶ್ರೀ ಎಂ. ಎನ್. ಸಿದ್ದಪ್ಪ ಗೌಡರ ಸ್ಥಿರ ಆಸ್ತಿಯನ್ನು ಮಾರಾಟ ಮಾಡದಂತೆ, ವಿಕ್ರಯಿಸದಂತೆ ಮತ್ತು ವರ್ಗಾಯಿಸದಂತೆ ಆದೇಶಿಸಿದೆ ಅಲ್ಲದೆ ಇವರ ಸ್ಥಿರ ಆಸ್ತಿಗಳನ್ನು ಕೊಂಡುಕೊಳ್ಳುವುದರಿಂದ ಆಸ್ತಿಯು ಸಿಂಧುವಾಗುವುದಿಲ್ಲವೆಂದು ಕೊಂಡುಕೊಳ್ಳುವವರಿಗೆ ತಿಳಿಸಲಾಗಿದೆ.

ತಾ|| 29–6–87ರಂದು ನನ್ನ ಸ್ವಹಸ್ತ ಮತ್ತು ಕಛೇರಿ ಮೊಹರಿನೊಡನೆ ನೀಡಿದೆ.

(ಸಹಿ) **ಸಹಕಾರ ಸಂಘಗಳ ಸಹಾಯಕ ನಿಬಂಧಕರು,**
ಚಿಕ್ಕಮಗಳೂರು

ಪ ರಿ ಶಿ ಷ್ಟ

ಖಾತೆದಾರರ ಹೆಸರು	ತಾಲ್ಲೂಕು	ಗ್ರಾಮ	ಸರ್ವೆ ನಂ.	ವಿಸ್ತೀರ್ಣ	ವರ್ಗ
ಎಂ.ಎನ್. ಸಿದ್ದಪ್ಪಗೌಡ	ಶ್ರಿಂಗೇರಿ	ಮಲೆನಾಡು	4 ಪಿ	0.27	ತರಿ
ಬಿನ್ ನಾಗಪ್ಪ ಗೌಡ			103 ಪಿ	0.10	ಬಾಗಾಯ್ತು
			105 ಪಿ	0.17	ಬಾಗಾಯ್ತು
			107 ಪಿ	1.09	ತರಿ

ಗೆ, **ಶ್ರೀ ಎಂ. ಎನ್. ಸಿದ್ದಪ್ಪ ಗೌಡ ಬಿನ್ ನಾಗಪ್ಪ ಗೌಡ,**
ಕಾರ್ಯದರ್ಶಿ (ಮಾಜಿ), ವ್ಯವಸಾಯ ಸೇವಾ ಸಹಕಾರ ಸಂಘ ನಿ., ನೆಮ್ಮಾರು.

1. ನಕಲನ್ನು ಸಬ್ ರಿಜಿಸ್ಟ್ರಾರ್‌ರವರು, ಶೃಂಗೇರಿ, ಇವರಿಗೆ ರವಾನಿಸಲಾಗಿದೆ ಶ್ರೀ ಎಂ.ಎನ್. ಸಿದ್ದಪ್ಪ ಗೌಡರ ಹೆಸರಿನಲ್ಲಿರುವ ಸ್ಥಿರ ಆಸ್ತಿಯನ್ನು ಬೇರೆಯವರಿಗೆ ನೊಂದಾಯಿಸದಂತೆ ಕೋರಲಾಗಿದೆ.
2. ತಹಸೀಲ್ದಾರ್, ಶೃಂಗೇರಿ, ಇವರಿಗೆ ರವಾನಿಸಲಾಗಿದೆ. ಶ್ರೀ ಎಂ. ಎನ್. ಸಿದ್ದಪ್ಪ ಗೌಡರ ಖಾತೆಯಲ್ಲಿರುವ ಸ್ಥಿರ ಆಸ್ತಿಯನ್ನು ಬೇರೆಯವರಿಗೆ ವರ್ಗಾಯಿಸದಂತೆ ಕೋರಲಾಗಿದೆ.

(ಸಹಿ) **ಸಹಕಾರ ಸಂಘಗಳ ಸಹಾಯಕ ನಿಬಂಧಕರು,**
ಚಿಕ್ಕಮಗಳೂರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಪಟಿಗೆ ಅಚ್ಚುಕೂಟ, ಕೊಪ್ಪ